ಸಂಪುಟ : 13 Volume | ಸಂಚಿಕೆ : 204 Issue | ಪುಟಗಳು : 08 Pages | ಶುಕ್ರವಾರ 26 ಸೆಪ್ಟೆಂಬರ್ 2025 | ₹2 | RNINO:KARKAN/2011/48371 | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**
" ಪ್ರೇಮ ಬೆಂಕಿಯು ಎಲ್ಲವನ್ನೂ ಪವಿತ್ರವಾಗಿಸುತ್ತದೆ "
- ಡಾ || ರಾಧಾಕೃಷ್ಣನ್ .

ಗ್ರಾಮ ಕಸಮುಕ್ತ ಮಾಡುವ ಗುರಿ 2 | ಎನ್.ಎಸ್.ಎಸ್.ಕೆಯಲ್ಲಿ ಮತಗಳ್ಳತನ 4 | 39 ನಿಗಮ-ಮಂಡಳಿಗಳಿಗೆ ನೇಮಕ 8

# ಜಾತಿ ಗಣತಿಗೆ ಹಾಜರಾಗದ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಕ್ರಮ

ಮಲ್ಲಮ್ಮನುಡಿವಾರ್ತೆ ಬೆಂಗಳೂರು:ಸೆ.25: ಜಾತಿ ಗಣತಿಎಂದೇಜನಪ್ರಿಯವಾಗಿರುವಸಾಮಾಜಿಕಮತ್ತು ಶೈಕ್ಷಣಿಕಸಮೀಕ್ಷೆನಡೆಸದಸರ್ಕಾರಿಅಧಿಕಾರಿಗಳುಮತ್ತು ಸಿಬ್ಬಂದಿಗಳವಿರುದ್ಧಶಿಸ್ತುಕ್ರಮಕೈಗೊಳ್ಳಲುಗುರುವಾರ ಸಚಿವ ಸಂಪುಟ ನಿರ್ಧರಿಸಿದೆ.ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಅವರು, ಬೆಂಗಳೂರಿನಲ್ಲಿಸಮೀಕ್ಷೆಗೆ ಸಿಬ್ಬಂದಿಗೈರಾದರೆಅವರವಿರುದ್ಧಶಿಸ್ತುಕ್ರಮಕೈಗೊಳ್ಳುವ ಅಧಿಕಾರವನ್ನು ಮುಖ್ಯ ಆಯುಕ್ತರಿಗೆ ನೀಡಲಾಗಿದೆ. ಇನ್ನು ಜಿಲ್ಲಾಮಟ್ಟದಲ್ಲಿಜಿಲ್ಲಾಧಿಕಾರಿಗಳುಈನಿಟ್ಟಿನಲ್ಲಿ ಕ್ರಮಕೈಗೊಳ್ಳಲಿದ್ದಾರೆಎಂದುತಿಳಿಸಿದರು.ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಾಗಿ ನಿಯೋಜಿಸಲಾದ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಆದೇಶದ ಪ್ರಕಾರತಮ್ಮಕರ್ತವ್ಯವನ್ನುನಿರ್ವಹಿಸದಿದ್ದರೆಅಥವಾ ಹಾಜರಾಗದಿದ್ದರೆಅವರವಿರುದ್ಧಶಿಸ್ತುಕ್ರಮಕೈಗೊಳ್ಳಲು ನಿರ್ಧರಿಸಲಾಗಿದೆ. ಗ್ರೇಟರ್ ಬೆಂಗಳೂರುಪ್ರಾಧಿಕಾರ ಪ್ರದೇಶದಲ್ಲಿಕ್ರಮಕೈಗೊಳ್ಳುವಅಧಿಕಾರವನ್ನುಜಿಬಿಎ



ಆಯುಕ್ತರಿಗೆನೀಡಲಾಗಿದೆಎಂದುಎಚ್ ಕೆ ಪಾಟೀಲ್ ಅವರುಸುದ್ದಿಗಾರರಿಗೆತಿಳಿಸಿದರು.ಜಾತಿಗಣತಿವಿವಾದ ಆಗುತ್ತಿರುವ ಹಿನ್ನೆಲೆಯಲ್ಲಿಕೆಲವು ಸಿಬ್ಬಂದಿ ಸಮೀಕ್ಷೆಗೆ ಮನೆ ಮನೆಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಬೇರೆ ಬೇರೆ ಕಾರಣಗಳನ್ನು ನೀಡಿ ಸಮೀಕ್ಷೆಗೆ ತೆರಳಲು ಮುಂದಾಗುತ್ತಿಲ್ಲ. ಹೀಗಾಗಿಈಬಗ್ಗೆದೂರುಗಳುಕೇಳಿ ಬಂದಹಿನ್ನೆಲೆಯಲ್ಲಿಸಚಿವಸಂಪುಟಸಭೆಯಲ್ಲಿಚರ್ಚೆ ನಡೆದಿದೆ. ಸಿಎಂಸಿದ್ದರಾಮಯ್ಯ ಅವರುಈನಿಟ್ಟಿನಲ್ಲಿ ಖಡಕ್ಸೂಚನೆನೀಡಿದ್ದು, ಹಾಜರಾಗದಸಿಬ್ಬಂದಿವಿರುದ್ಧ ಶಿಸ್ತು ಕ್ರಮಕ್ಕೆ ಸೂಚನೆ ನೀಡಿದರು.

ಇತರ ಜಿಲ್ಲೆಗಳ ಬಗ್ಗೆ ಕೇಳಿದಾಗ, ಈ ಆದೇಶ ಜಿಲ್ಲೆಗಳಿಗೂಅನ್ವಯವಾಗುತ್ತದೆ. ಮುಖ್ಯಮಂತ್ರಿಗಳು ನಾಳೆ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಸಿಇಒ ಜೊತೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಸಭೆ ನಡೆಸುತ್ತಿದ್ದಾರೆ. ಈ ಸಭೆಯಲ್ಲಿ ಅಗತ್ಯ ನಿರ್ದೇಶನಗಳನ್ನು ನೀಡಲಿದ್ದಾರೆ. ತಪ್ಪಿತಸ್ಥಅಧಿಕಾರಿಗಳವಿರುದ್ಧಶಿಸ್ತುಕ್ರಮಕೈಗೊಳ್ಳುವುದು ಸೇವಾನಿಯಮಗಳಿಗೆಅನುಸಾರವಾಗಿರುತ್ತದೆಎಂದು ಸಚಿವರು ಹೇಳಿದರು.

ಸಮೀಕ್ಷೆಯಸಮಯದಲ್ಲಿಎದುರಿಸುತ್ತಿರುವತಾಂತ್ರಿಕ ಸಮಸ್ಯೆಗಳಬಗ್ಗೆಯೂಸಂಪುಟಸಭೆಯಲ್ಲಿಚರ್ಚಿಸಲಾಗಿದೆ. ಮೊದಲಮತ್ತುಎರಡನೇದಿನಸರ್ವರ್‌ಸಮಸ್ಯೆಗಳಿದ್ದವು ಎಂಬುದು ನಿಜ. ಆದರೆ ಇಂದು ಪರಿಸ್ಥಿತಿ ಸುಧಾರಿಸಿದೆ ಎಂಬ ಮಾಹಿತಿ ಇದೆ ಎಂದು ಅವರು ಹೇಳಿದರು. ಸೆಪ್ಟೆಂಬರ್22ರಂದುಪ್ರಾರಂಭವಾದಕರ್ನಾಟಕರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಈ ಸಮೀಕ್ಷೆಯು ಅಕ್ಟೋಬರ್ 7 ರವರೆಗೆ ನಡೆಯಲಿದೆ.

# ಡಿಸಿಸಿ ಬ್ಯಾಂಕ್ ನಿರ್ದೇಶಕ ಕುಲಕರ್ಣಿಗೆ ಸನ್ಮಾನ



ಮಲ್ಲಮ್ಮನುಡಿ ವಾರ್ತೆ

ಹುಮನಾಬಾದ್ : ಡಿಸಿಸಿ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ 23ರಂದು ನಡೆದ ಚುನಾವಣೆಯಲ್ಲಿವಿಜೇತರಾದಉಮೇಶಕುಲಕರ್ಣಿಗೆಹುಮನಾಬಾದ್ ಪಟ್ಟಣದಲ್ಲಿ ಮಾಜಿ ಸಚಿವ ರಾಜಶೇಖರ ಪಾಟೀಲ್ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್, ಜಿಪಂ. ಮಾಜಿ ಸದಸ್ಯ ವೀರಣ್ಣ ಪಾಟೀಲ್, ತಾಪಂ. ಮಾಜಿ ಸದಸ್ಯ ಶ್ರೀಮಂತಪಾಟೀಲ್, ಮಲ್ಲಿಕಾರ್ಜುನಪ್ರಭಾ, ಸತೀಷರಾಂಪೂರೆ, ಶ್ರೀಕಾಂತ ಕುಲಕರ್ಣಿ, ಪ್ರಕಾಶ ತಾಳಮಡಗಿ, ಮಾಣಿಕಪ್ಪ ಹಿಪ್ಪರ್ಗಾ, ಚಂದ್ರಶೇಖರ ಪಾವಡಶೆಟ್ಟಿ ಸೇರಿ ಅನೇಕರಿದ್ದರು.

# ಭೀಮಾ ನದಿಗೆ 3.40 ಲಕ್ಷ ಕ್ಯೂಸೆಕ್ ನೀರು ಬಿಡುಗಡೆ




ಮಲ್ಲಮ್ಮನುಡಿ ವಾರ್ತೆ

ಕಲಬುರಗಿ:ಸೆ.25: ಜಿಲ್ಲೆಯ ಸೊನ್ನ ಬ್ಯಾರೇಜ್‌ನಿಂದ ಭೀಮಾ ನದಿಗೆ 3.40 ಲಕ್ಷ ಕ್ಯೂಸೆಕ್ ನೀರು ಬಿಡುಗಡೆ ಮಾಡಿದ ಪರಿಣಾಮ ನದಿ ನೀರು ಹಾಗರಗುಂಡಗಿ ಗ್ರಾಮದ ರೈತರ ಜಮೀನಿಗೆ ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ.ಮಹಾರಾಷ್ಟ್ರದಲ್ಲಿ ಧಾರಾಕಾರ ಮಳೆ ಹಿನ್ನೆಲೆ ಭೀಮಾ ನದಿಗೆಅಪಾರಪ್ರಮಾಣದನೀರುಬಿಡುಗಡೆಮಾಡಲಾಗಿದೆ. ಮಹಾರಾಷ್ಟ್ರದ ಉಜ್ಜನಿಜಲಾಶಯದಿಂದ50,000ಕ್ಯೂಸೆಕ್, ಸಿನಾಜಲಾಶಯದಿಂದ2.70 ಲಕ್ಷ ಕ್ಯೂಸೆಕ್, ಭೋರಿ ಹಳ್ಳದಿಂದ 3.20 ಲಕ್ಷ ಕ್ಯೂಸೆಕ್ ನೀರು ಭೀಮಾ ನದಿಗೆಬಿಡುಗಡೆಮಾಡಲಾಗಿದೆ. ಅಫಜಲಪುರದಸೊನ್ನ ಬ್ಯಾರೇಜ್‌ನಿಂದ 3.20 ಲಕ್ಷ ಕ್ಯೂಸೆಕ್ ನೀರು ಭೀಮಾ ನದಿಗೆ ನೀರು ಬಿಡಲಾಗಿದೆ.

ನದಿ ನೀರು ಹಾಗರಗುಂಡಗಿ ಗ್ರಾಮದ ರೈತರ ಜಮೀನುಗಳಿಗೆ ನುಗ್ಗಿದೆ. ಹತ್ತಿ, ತೊಗರಿಸೇರಿದಂತೆಅಪಾರಪ್ರಮಾಣದಬೆಳೆನಾಶವಾಗಿದ್ದು, ರೈತರು ಕಂಗಲಾಗಿದ್ದಾರೆ.ಇದೀಗಕಲಬುರಗಿ, ಯಾದಗಿರಿ, ರಾಯಚೂರುಹಾಗೂ ವಿಜಯಪುರದ ನದಿ ಪಾತ್ರದ ಜನರಲ್ಲಿ ಪ್ರವಾಹ ಆತಂಕ ಸೃಷ್ಟಿಯಾಗಿದೆ. ಜನರು ನದಿಯ ದಡಕ್ಕೆ ಹೋಗದಂತೆ ಜಿಲ್ಲಾಡಳಿತ ಮುನ್ನೆಚ್ಚರಿಕೆ ನೀಡಿದೆ.

# ರಗಾಸಾ ಚಂಡಮಾರುತ 20ಕ್ಕೂ ಹೆಚ್ಚು ಜನರ ಸಾವು



ಮಲ್ಲಮ್ಮನುಡಿ ವಾರ್ತೆ ಹಾಂಗ್‌ಕಾಂಗ್:ಸೆ.25: ರಗಾಸಾ ಚಂಡಮಾರುತದಅಬ್ಬರಕ್ಕೆತೈವಾನ್, ಫಿಲಿಪೈನ್ ಅಕ್ಷರಶಃ ತತ್ತರಿಸಿ ಹೋಗಿದ್ದು, 20ಕ್ಕೂ ಅಧಿಕ ಜನರು ಸಾವನ್ನಪ್ಪಿದ್ದಾರೆ.ಬಿರುಗಾಳಿಗಳರಾಜಎಂದೇಕರೆಯುವ ರಗಾಸಾ ಚಂಡಮಾರುತವು ಫಿಲಿಪೈನ್ಸ್ , ತೈವಾನ್, ಹಾಂಗ್‌ಕಾಂಗ್ ಮತ್ತು ದಕ್ಷಿಣಚೀನಾವನ್ನುವ್ಯಾಪಿಸಿದೆ. ಸದ್ಯ ಈ ದೇಶಗಳಲ್ಲಿ ಒಟ್ಟಾರೆ 20 ಲಕ್ಷ ಜನರನ್ನು ಸ್ಥಳಾಂತರಮಾಡಲಾಗಿದೆ. ಹುವಾಲಿಯನ್‌ಕೌಂಟಿಯಲ್ಲಿ ತಡೆಗೋಡೆ ಒಡೆದ ಪರಿಣಾಮ ತೈವಾನ್‌ನಲ್ಲಿ ಕೆಸರು ಮಿಶ್ರಿತಪ್ರವಾಹದನೀರುನುಗ್ಗಿಮನೆಗಳು, ರಸ್ತೆಗಳು ಕೆಸರುಗದ್ದೆಯಂತಾಗಿದ್ದು, ಸುಮಾರು 8 ಸಾವಿರಕ್ಕೂ ಅಧಿಕಮಂದಿಯನ್ನುಸ್ಥಳಾಂತರಮಾಡಲಾಗಿದೆ.ಸದ್ಯ ತೈವಾನ್‌ಮತ್ತುಫಿಲಿಪೈನ್ಸ್ ನಲ್ಲಿತೆರವುಕಾರ್ಯಾಚರಣೆ ನಡೆಯುತ್ತಿದ್ದು, 20ಕ್ಕೂಅಧಿಕಮಂದಿಸಾವನ್ನಪ್ಪಿದ್ದಾರೆ. ತೈವಾನ್‌ನಲ್ಲಿ 14 ಜನಹಾಗೂ

ಫಿಲಿಪೈನ್ಸ್ ನಲ್ಲಿ 15 ಜನ ಸಾವನ್ನಪ್ಪಿದ್ದು, 100ಕ್ಕೂ ಅಧಿಕಜನರುಗಾಯಗೊಂಡಿದ್ದಾರೆಎಂದುಮೂಲಗಳಿಂದ ತಿಳಿದುಬಂದಿದೆ.ಚಂಡಮಾರುತದದೃಶ್ಯಗಳುಸಾಮಾಜಿಕ ಜಾಲತಾಣದಲ್ಲಿವೈರಲ್‌ಆಗುತ್ತಿದ್ದು, ಬೆಚ್ಚಿಬೀಳಿಸುವಂತಿದೆ. ವಿಡಿಯೋವೊಂದರಲ್ಲಿಹಾಂಗ್‌ಕಾಂಗ್‌ನದೊಡ್ಡಹೋಟೆಲ್‌ಗೆ ನೀರು ಅಪ್ಪಳಿಸಿ, ಗಾಜು ಒಡೆದು ಹೋಗುವ ದೃಶ್ಯ ಕಂಡುಬಂದಿದೆ. ಇನ್ನೂಗುವಾಂಗ್‌ಡಾಂಗ್ ನಗರದ ಯಾಂಗ್‌ಜಿಯಾಂಗ್‌ನಲ್ಲಿ50,000ಕ್ಕೂಹೆಚ್ಚುಮರಗಳು ನೆಲಸಮಗೊಂಡಿದ್ದು, 56,000ಕ್ಕೂಮನೆಗಳಿಗೆಸಂಪರ್ಕ ಕಲ್ಪಿಸುವ ವಿದ್ಯುತ್ ತಂತಿಗಳು ಕಡಿತಗೊಂಡಿವೆ

# ಜಾತಿ ಗಣತಿಗೆ ತಡೆ ನೀಡಲು ಹೈಕೋರ್ಟ್ ನಕಾರ



ಮಲ್ಲಮ್ಮನುಡಿ ವಾರ್ತೆ

ಬೆಂಗಳೂರು:ಸೆ.25: ಕರ್ನಾಟಕರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸುತ್ತಿರುವ ಸಾಮಾಜಿಕ-ಆರ್ಥಿಕ ಮತ್ತುಶೈಕ್ಷಣಿಕಸಮೀಕ್ಷೆ(ಜಾತಿಗಣತಿ)ಗೆ ತಡೆನೀಡಲುಕರ್ನಾಟಕಹೈಕೋರ್ಟ್ ಗುರುವಾರನಿರಾಕರಿಸಿದೆ. ಇದರಿಂದರಾಜ್ಯ ಸರ್ಕಾರಕ್ಕೆಬಿಗ್ ರಿಲೀಫ್ ಸಿಕ್ಕಂತಾಗಿದೆ. ಜಾತಿ ಗಣತಿಗೆ ತಡೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ ಎಂ ಜೋಶಿ ಅವರನ್ನೊಳಗೊಂಡ ವಿಭಾಗೀಯ ಪೀಠ, ಎರಡು ದಿನ ವಿವರವಾದ ವಾದಗಳನ್ನು ಆಲಿಸಿತು. ಅಂತಿಮವಾಗಿ ಇಂದು ಜಾತಿ ಗಣತಿಗೆ ತಡೆ ನೀಡಲು ನಿರಾಕರಿಸಿ ಮಧ್ಯಂತರ ಆದೇಶ ಹೊರಡಿಸಿದೆ. ಆದರೆರಾಜ್ಯಸರ್ಕಾರದಜಾತಿಗಣತಿಸಮೀಕ್ಷೆನಡೆಸಲುಕೆಲವುಷರತ್ತುಗಳನ್ನುಹೈಕೋರ್ಟ್ ವಿಧಿಸಿದ್ದು, ದತ್ತಾಂಶವನ್ನುರಾಜ್ಯಸರ್ಕಾರಸೇರಿಯಾರಿಗೂಬಹಿರಂಗಪಡಿಸಬಾರದು. ದತ್ತಾಂಶದಗೌಪ್ಯತೆಯನ್ನುಹಿಂದುಳಿದ ವರ್ಗಗಳ ಆಯೋಗ ರಕ್ಷಿಸಬೇಕು ಎಂದು ಸೂಚಿಸಿದೆ.ಜನರು ಸ್ವಯಂಪ್ರೇರಣೆಯಿಂದ ಮಾಹಿತಿ ನೀಡಿದರಷ್ಟೇ ಪಡೆಯಬೇಕು. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಮಾಹಿತಿ ನೀಡುವಂತೆ ಯಾವುದೇ ಒತ್ತಡ ಹಾಕಬಾರದು ಎಂದು ಹೈಕೋರ್ಟ್ ಮಹತ್ವದ ಷರತ್ತು ವಿಧಿಸಿ, ವಿಚಾರಣೆಯನ್ನು ಡಿಸೆಂಬರ್ ಎರಡನೇ ವಾರಕ್ಕೆ ಮುಂದೂಡಿದೆ.ರಾಜ್ಯ ಸರ್ಕಾರದ ಪರವಾಗಿ ವಾದ ಮಂಡಿಸಿದ್ದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಈ ಅರ್ಜಿಗಳು ಯಾವುದೇ ಸಾಂವಿಧಾನಿಕ ನಿಬಂಧನೆಗಳನ್ನು ಅಥವಾ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ, 1995 ರ ನಿರ್ದಿಷ್ಟ ವಿಭಾಗಗಳನ್ನು ಗುರಿಯಾಗಿಸಿಕೊಂಡಿಲ್ಲ. ಆದರೆ ವಾಸ್ತವವಾಗಿ ಸರ್ಕಾರ ಅಧಿಕಾರ ಚಲಾಯಿಸುವುದನ್ನು ತಡೆಯಲು ಪ್ರಯತ್ನಿಸುತ್ತಿವೆ ಎಂದು ಹೇಳಿದರು.ಅರ್ಜಿದಾರರು ಎತ್ತಿರುವ ಆಕ್ಷೇಪಣೆಗಳು, ಸಮೀಕ್ಷೆಯು ಅವೈಜ್ಞಾನಿಕ ಎಂಬ ಸಾಮಾನ್ಯ ಆರೋಪಗಳಾಗಿವೆ. ಸಮೀಕ್ಷೆಯ ವರದಿಯನ್ನು ಸಾರ್ವಜನಿಕಗೊಳಿಸಿದನಂತರಮಾತ್ರ ಇದನ್ನುಪರಿಶೀಲಿಸಬಹುದುಎಂದುಅವರುಸಮರ್ಥಿಸಿಕೊಂಡರು.ರಾಜ್ಯ ಸರ್ಕಾರಗಳು ಕಲ್ಯಾಣ ಯೋಜನೆಗಳಿಗೆ ದತ್ತಾಂಶ ಸಂಗ್ರಹಿಸುವ ಅಧಿಕಾರ ಹೊಂದಿವೆ ಎಂದು ಪ್ರತಿಪಾದಿಸಲು ಸುಪ್ರೀಂ ಕೋರ್ಟ್‌ನ ಪುಟ್ಟಸ್ವಾಮಿ ತೀರ್ಪನ್ನು ಸಹ ಸಿಂಘ್ವಿ ಉಲ್ಲೇಖಿಸಿದರು.

# ಮತ ಎಣಿಕೆ ನಿಯಮ ಪರಿಷ್ಕರಿಸಿದ ಆಯೋಗ

ಮಲ್ಲಮ್ಮನುಡಿವಾರ್ತೆ ನವದೆಹಲಿ:ಸೆ.25: ಹೆಚ್ಚಿನಪಾರದರ್ಶಕತೆಯನ್ನು ತರುವ ಉದ್ದೇಶದಿಂದ ಚುನಾವಣಾ ಆಯೋಗವು ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಅಂಚೆಮತಪತ್ರಗಳ ಎಣಿಕೆಪ್ರಕ್ರಿಯೆಯನ್ನು ಸುಗಮಗೊಳಿಸಿದೆ. ಇಲ್ಲಿಯವರೆಗೆ, ಎಣಿಕೆಯದಿನದಂದು, ಅಂಚೆಮತಪತ್ರಗಳ ಎಣಿಕೆ ಬೆಳಗ್ಗೆ 8 ಗಂಟೆಗೆ ಮತ್ತು ಇವಿಎಂ ಮತಗಳ ಎಣಿಕೆ ಬೆಳಗ್ಗೆ 8:30 ಕ್ಕೆ




ಪ್ರಾರಂಭವಾಗುತ್ತದೆ. ಹಿಂದಿನಸೂಚನೆಗಳ ಪ್ರಕಾರ, ಅಂಚೆ ಮತಪತ್ರಗಳ ಎಣಿಕೆಯ ಹಂತವನ್ನು ಲೆಕ್ಕಿಸದೆ ಇವಿಎಂಎಣಿಕೆಸೈದ್ಧಾಂತಿಕವಾಗಿ ಮುಂದುವರಿಯಬಹುದು ಮತ್ತು ಅಂಚೆ ಮತಪತ್ರಗಳ ಎಣಿಕೆ ಪೂರ್ಣಗೊಳ್ಳುವ ಮೊದಲು ಇವಿಎಂ ಮತ ಎಣಿಕೆ ಪೂರ್ಣಗೊಳಿಸಬಹುದಾಗಿತ್ತು. ಆದರೆ ಎಣಿಕೆ ಪ್ರಕ್ರಿಯೆಯಲ್ಲಿ ಏಕರೂಪತೆ ಮತ್ತು ಅತ್ಯಂತ ಸ್ಪಷ್ಟತೆಯನ್ನು ಖಚಿತಪಡಿಸಿಕೊಳ್ಳಲು, ಚುನಾವಣಾ ಆಯೋಗ ಇವಿಎಂಗಳ ಮತ ಎಣಿಕೆಗೂ ಮೊದಲು ಅಂಚೆ ಮತಪತ್ರಗಳ ಎಣಿಕೆ ಪೂರ್ಣಗೊಳಿಸಲು ನಿರ್ಧರಿಸಿದೆ. ಈಗ ಅಂಚೆ ಮತಪತ್ರಗಳ ಎಣಿಕೆ ನಡೆಯುತ್ತಿರುವ ಎಣಿಕೆ ಕೇಂದ್ರದಲ್ಲಿ ಅಂತಿಮ ಸುತ್ತಿನ ಇವಿಎಂ ಎಣಿಕೆ ಕೈಗೊಳ್ಳುವ ಮುನ್ನ ಅಂಚೆ ಮತಪತ್ರಗಳ ಎಣಿಕೆ ಪೂರ್ಣಗೊಳಿಸಲು ನಿರ್ಧರಿಸಿದೆ.

# ಶಿಕ್ಷಕನ ಬಂಧನ

ಶ್ರೀನಗರ.ಸೆ25: ಏಪ್ರಿಲ್ 22 ರಂದುಪಹಲ್ಗಾಮ್ ಭಯೋತ್ಪಾದಕ ದಾಳಿಯಉಗ್ರರಿಗೆಸಹಾಯಮಾಡಿದ್ದ ಜಮ್ಮು ಮತ್ತುಕಾಶ್ಮೀರದವ್ಯಕ್ತಿಯನ್ನ ಪೊಲೀಸರುಬಂಧಿಸಿದ್ದಾರೆ.ಬಂಧಿತನನ್ನ 26ವರ್ಷದಮೊಹಮ್ಮದ್ ಯೂಸುಫ್ ಕಟಾರಿ ಎಂದು ಗುರುತಿಸಲಾಗಿದೆ.




# ಹರಾಜು ಮೂಲಕ ಮದ್ಯದ ಅಂಗಡಿಗಳ ಹಂಚಿಕೆ

ಮಲ್ಲಮ್ಮನುಡಿ ವಾರ್ತೆ ಬೆಂಗಳೂರು:ಸೆ.25: ಅವಧಿ ಮುಗಿದಿರೋ ಮದ್ಯದ ಅಂಗಡಿಗಳನ್ನ ಹರಾಜು ಮೂಲಕ ಹಂಚಿಕೆ ಮಾಡೋ ಪ್ರಕ್ರಿಯೆ ಮಾಡಲಾಗಿದ್ದು, ಆದಷ್ಟು ಬೇಗ ಪ್ರಕ್ರಿಯೆ ತಿಮ್ಮಾಪುರ್ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಹರಾಜುಪ್ರಕ್ರಿಯೆಗೆತಯಾರಿಆಗ್ತಿದೆ. ಹರಾಜು ಎಂದು ಅಂದುಕೊಳ್ಳಲಾಗಿದೆ. ಈಗಾಗಲೇ ಆಗಿ ಸಹಿ ಆಗಿದೆ. ಆದಷ್ಟು ಬೇಗ ಹರಾಜು ಆಗಿ ಹರಾಜು ಹಾಕಬೇಕಾ? ಮೀಸಲಾತಿ ಚರ್ಚೆಮಾಡ್ತೀನಿ. ಹರಾಜುಪ್ರಕ್ರಿಯೆಯಿಂದ ಅಂತ ನಿರೀಕ್ಷೆ ಇದೆ. ಮೀಸಲಾತಿ ಕೊಟ್ಟರೆ



ಶುರುವಾಗಿದೆ. ಕರಡುನಿಯಮಬಿಡುಗಡೆ ಶುರು ಮಾಡೋದಾಗಿ ಅಬಕಾರಿ ಸಚಿವ ಸುದ್ದಿಗಾರರೊಂದಿಗೆಮಾತನಾಡಿದಅವರು, ಪ್ರಕ್ರಿಯೆಯಲ್ಲಿಮೀಸಲಾತಿಕೊಡಬೇಕು ಹರಾಜು ಪ್ರಕ್ರಿಯೆಯ ಡ್ರಾಫ್ಟ್ ರೆಡಿ ಪ್ರಕ್ರಿಯೆಆಗಲಿದೆಎಂದಿದ್ದಾರೆ. ಜನರಲ್ ಕೊಡಬೇಕಾ ಅಂತ ಸಿಎಂ ಜೊತೆ ನಾಳೆ 2ಸಾವಿರಕೋಟಿರೂ. ಲಾಭಬರಬಹುದು ಸಹಾಯ ಅಗುತ್ತದೆ ಅಂತ ಚರ್ಚೆ ಇದೆ. ಚರ್ಚೆ ಮಾಡಿ ನಿರ್ಧಾರ ಮಾಡ್ತೀವಿ ಎಂದು ಹೇಳಿದ್ದಾರೆ.ಹೊಸ ಲೈಸೆನ್ಸ್ ಕೊಡ್ತಿಲ್ಲ. ಕೊಡೋದು ಇಲ್ಲ. ಈಗ ಯಾವುದು ಇದೆಯೋ ಅದಕ್ಕೆ ಮಾತ್ರ ಹರಾಜು ಮೂಲಕ ಲೈಸೆನ್ಸ್ ಕೊಡ್ತೀವಿ ಎಂದು ಸ್ಪಷ್ಟಪಡಿಸಿದ್ದಾರೆ.

ಏಷ್ಯಾಕಪ್:ಬಾಂಗ್ಲಾದೇಶ ವಿರುದ್ಧ ನಡೆದ ಪಂದ್ಯದಲ್ಲಿ ಅತಿ ಹೆಚ್ಚು ಸಿಕ್ಸ್ ಸಿಡಿಸಿದ ಬ್ಯಾಟರ್ ಅಭಿಷೇಕ್ ಶರ್ಮಾ

# ಗ್ರಾಮಗಳನ್ನು ಕಸಮುಕ್ತ ಮಾಡುವ ಗುರಿ



ಸ್ವಚ್ಛತಾ ಹೀ ಸೇವಾ ಅಭಿಯಾನ ಅಂಗವಾಗಿ ಜಿಲ್ಲೆಯಾದ್ಯಂತ ಅ.2ರ ವರೆಗೆ ಸ್ವಚ್ಛತೆಯ ಅಭಿಯಾನ ಮತ್ತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಇದರಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು.

–ಡಾ.ಗಿರೀಶ ಬದೋಲೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಬೀದರ್

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.25: ಗ್ರಾಮೀಣ ಭಾಗಗಳಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಅ.2ರ ವರೆಗೆ ಸ್ವಚ್ಛತಾ ಹೀ ಸೇವಾ' ಅಭಿಯಾನವನ್ನು ಆಯೋಜಿಸಲಾಗಿದೆ. ಸ್ವಯಂ ಪ್ರೇರಣೆ ಮತ್ತು ಸಾಮೂಹಿಕ ಶ್ರಮದಿಂದ ಮಾತ್ರ ನಾವು ನಮ್ಮ ಸುತ್ತಮುತ್ತಲಿನ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಡಬಹುದು ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ ಹೇಳಿದರು.

ತಾಲೂಕಿನ ಮಳಚಾಪೂರ ಗ್ರಾಪಂ ವ್ಯಾಪ್ತಿಯ ಖಾನಾಪುರ ಗ್ರಾಮದ ಮೈಲಾರ ಮಲ್ಲಣ್ಣ ದೇಗುಲದ ಆವರಣದಲ್ಲಿ ಗುರುವಾರ ಸ್ವಚ್ಛತಾ ಹೀ ಸೇವಾ–2025 ಇದರಡಿ ಆಯೋಜಿಸಿದ್ದ ಶ್ರಮದಾನ–ಸ್ವಚ್ಛತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಗ್ರಾಮಗಳನ್ನು ಕಸಮುಕ್ತ ಮಾಡುವ ಗುರಿಯೊಂದಿಗೆ ಕಸ ಸಂಗ್ರಹಣೆ, ವಿಲೇವಾರಿ ಮತ್ತು ಸ್ವಚ್ಛತಾ ಶ್ರಮದಾನ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ಜಿಲ್ಲೆಯ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಈ ಅಭಿಯಾನವನ್ನು ಆಯೋಜಿಸಲಾಗಿದ್ದು, ಅಭಿಯಾನದ ಕಾಲಾವಧಿ ಪ್ರಕಾರ ತಮ್ಮ ತಮ್ಮ ಗ್ರಾಪಂಗಳಲ್ಲಿ ಸ್ವಚ್ಛತೆ ಕೈಗೊಂಡಿರುವ ಬಗ್ಗೆ ವಿವರಗಳನ್ನು ಸ್ವಚ್ಛತಾ ಸೇವಾ ಪೋರ್ಟಲ್‌ನಲ್ಲಿ ದಾಖಲಿಸಬೇಕು ಎಂದರು.ದೇಗುಲದ ಪರಿಸರ, ಕಲ್ಯಾಣಿ, ದಾಸೋಹ ಸ್ಥಳ, ಪವಿತ್ರ ಸ್ನಾನ ಕುಂಡ, ದೇವಸ್ಥಾನದ ಮುಖ್ಯ ರಸ್ತೆ ಇತ್ಯಾದಿ ಸ್ಥಳಗಳಲ್ಲಿ ಶ್ರಮದಾನ ಕೈಗೊಳ್ಳಲಾಯಿತು.ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ, ಸಹಾಯಕ ನಿರ್ದೇಶಕ ಚಂದ್ರಶೇಖರ ಬನ್ನಾಳೆ, ಮಳಚಾಪೂರ ಗ್ರಾಪಂ ಅಧ್ಯಕ್ಷೆ ಲಕ್ಷ್ಮಿ ??ಬಾಯಿ ಪಾಟೀಲ್, ಅಭಿವದ್ಧಿ ಅಧಿಕಾರಿ ಮುನೀರ್ ಸೇರಿದಂತೆ ಹಲವರು ಹಾಜರಿದ್ದರು.

# ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸಲು ಗ್ರಂಥಾಲಯ ಅತ್ಯಂತ ಸಹಕಾರಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.25: ಗ್ರಾಮೀಣ ಭಾಗದ ಮಕ್ಕಳಲ್ಲಿ ಗ್ರಂಥಾಲಯಗಳ ಬಳಕೆ ಹಾಗೂ ಅವರಲ್ಲಿ ಓದುವ ಹವ್ಯಾಸವನ್ನು ಬೆಳೆಸುವ ಉದ್ದೇಶದಿಂದ ಸರಕಾರವು ಗ್ರಾಮ ಗ್ರಂಥಾಲಯ ಯೋಜನೆ ಪರಿಚಯಿಸಿ ಅನುಷ್ಠಾನಕ್ಕೆ ತಂದಿದೆ ಎಂದು ತಾಲೂಕು ಪಂಚಾಯತಿ ಸಹಾಯಕ ನಿರ್ದೇಶಕ ಚಂದ್ರಶೇಖರ ಬನ್ನಾಳೆ ಹೇಳಿದರು.

ತಾಲೂಕಿನ ತಡವಾಳ(ಕೆ) ಗ್ರಾಪಂ ವ್ಯಾಪ್ತಿಯ ಕರಡ್ಯಾಳ ಗ್ರಾಮದಲ್ಲಿ ಸರಕಾರವು ನೂತನವಾಗಿ ಸ್ಥಾಪಿಸಿರುವ ಗ್ರಾಮ ಗ್ರಂಥಾಲಯವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರಕಾರವು ಈಗಾಗಲೇ ಅರಿವು ಕೇಂದ್ರ ಎಂಬ ಹೆಸರಿನಲ್ಲಿ ಪ್ರತಿಯೊಂದು ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನದಲ್ಲಿ ಗ್ರಾಮ ಪಂಚಾಯತ್ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ'ಗಳನ್ನು ಸ್ಥಾಪಿಸಿದೆ. ಇದರಂತೆ ಗ್ರಾಪಂ ವ್ಯಾಪ್ತಿಯ ಗ್ರಾಮವೊಂದರಲ್ಲಿ ಗ್ರಾಮ ಗ್ರಂಥಾಲಯವನ್ನು ಸ್ಥಾಪಿಸಿ ಸರಕಾರ ಗ್ರಾಮದಲ್ಲಿರುವ ಮಕ್ಕಳಿಗೆ ಜ್ಞಾನಧಾರೆಯನ್ನು ಎರೆಯುತ್ತಿದೆ. ಸರ್ಕಾರದ ಈ ಕೆಲಸ ಅತ್ಯಂತ ಶ್ಲಾಘನೀಯ. ಗ್ರಾಮದಲ್ಲಿರುವ ಮಕ್ಕಳು ಈ ಗ್ರಂಥಾಲಯದ ಲಾಭ ಪಡೆದುಕೊಳ್ಳಬೇಕು ಎಂದರು.ಗ್ರಾಪಂ ಅಧ್ಯಕ್ಷೆ ಅನುಪಮಾ ರಾಚಣ್ಣಾ ಅವರು ಗ್ರಂಥಾಲಯ ವಿಜ್ಞಾನದ ಪಿತಾಮಹ ಎಸ್.ಆರ್. ರಂಗನಾಥನ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ತಳವಾಡ ಕೆ ಗ್ರಾಪಂ ಪಿಡಿಒ ಪ್ರಭುಶೆಟ್ಟಿ ಅವರು ಅತಿಥಿ–ಗಣ್ಯರಿಗೆ ಸ್ವಾಗತಿಸಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ರಾಮರಾವ ಶೇರಿಕಾರ, ಗ್ರಾಮದ ಪ್ರಮುಖರು ಶಿವಶಂಕರ ಪಾಟೀಲ್, ಎಪಿಎಂಸಿ ಮಾಜಿ ಅಧಕ್ಷ ಬಾಬುರಾವ ವೀರಶಟ್ಟಿ, ಗ್ರಾಪಂ ಸದಸ್ಯರಾದ ಜಗನ್ನಾಥ, ಶಿವಕುಮಾರ, ಟಿಐಇಸಿಸಿ ಗಣಪತಿ, ಗ್ರಾಪಂ ಸಿಬ್ಬಂದಿ, ಶಾಲಾ ಮಕ್ಕಳು ಹಾಗೂ ಗ್ರಾಮಸ್ಥರು ಇದ್ದರು.

# ಮಾನಸಿಕ, ದೈಹಿಕ ಸದೃಢತೆಗೆ ಕ್ರೀಡೆ ಪೂರಕ : ಸುರೇಖಾ




ಬೀದರ. ಸೆ. 25 : ಯುವ ಪಿಳಿಗೆ ಶಕ್ತಿ ಈ ದೇಶದ ನಿಜವಾದ ಸಂಪತ್ತಾಗಿದ್ದು, ಈ ಸಂಪತ್ತು ಬಲಿಷ್ಟವಾಗಬೇಕಾದರೆ ಮಿತ ಹಾಗೂ ಹಿತ ಆಹಾರ ವಿಶೇಷವಾಗಿ ಜಂಕ್‌ಫೂಡ್ ರಹಿತ ಆಹಾರ ಸೇವನೆ ಅಗತ್ಯವಾಗಿದೆ ಎಂದು ಬೀದರ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಡಳಿತ ಸುರೇಖಾ ನುಡಿದರು. ದಿನಾಂಕ 25–09–2025 ರಂದು ನೇಹರು ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಗುರುನಾನಕ ಪಬ್ಲಿಕ್ ಶಾಲೆಯ ವಾರ್ಷಿಕ ಕ್ರೀಡಾಕೂಟ–2025–26ನೇ ಸಾಲಿಗೆ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಕ್ರೀಡೆಯಿಂದ ವಿದ್ಯಾರ್ಥಿಗಳಲ್ಲಿ ಶಿಸ್ತು ಬರುತ್ತದೆ. ಜೊತೆಗೆ ಅವರಲ್ಲಿ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯು ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಶಾಲೆಯಲ್ಲಿ ಕ್ರೀಡೆ ದೇಶದ ಪ್ರಗತಿಯಲ್ಲಿ ಶಿಕ್ಷಣದ ಪಾತ್ರವು ಅತ್ಯಂತ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬೆಳೆಸಲು ಶಿಕ್ಷಕರು ಕಾಳಜಿ ತೋರಬೇಕು. ತಂತ್ರಜ್ಞಾನದಲ್ಲಿ ನಾವು ಸಾಕಷ್ಟು ಮುಂದುವರೆದಿದ್ದೇವೆ. ಅದರಂತೆ ಕ್ರೀಡಾರಂಗದಲ್ಲಿ ಕೂಡ ಅಷ್ಟೇ ಪ್ರಮಾಣದಲ್ಲಿ ಮುಂದೆ ಬರೋಣ ಎಂದು ಸಲಹೆ ಮಾಡಿದರು. ಯಾವುದೇ ದೇಶದ ಅಭಿವೃದ್ಧಿಯನ್ನು ಬಹುತೇಕವಾಗಿ ಆ ದೇಶದ ಆರ್ಥಿಕ ಬೆಳವಣಿಗೆಯ ಮೇಲೆಯೇ ನಿರ್ಧರಿಸಲಾಗುತ್ತದೆ. ಆದರೆ,ಶೈಕ್ಷಣಿಕರಂಗ,ಕ್ರೀಡಾರಂಗಗಳು ಕೂಡ ಅದಕ್ಕೆ ಪೂರಕವಾಗಿರುತ್ತವೆ ಎಂಬುದನ್ನು ಅರ್ಥೈಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಕ್ರೀಡಾ ರಂಗದ ಬೆಳವಣಿಗೆಗೆ ಒತ್ತು ಕೊಡಬೇಕಿದೆ ಎಂದರು.

ಇನ್ನೊರ್ವ ಮುಖ್ಯ ಅತಿಥಿ ಕಷಿ ಸಹಾಯಕ ನಿರ್ದೇಶಕರುಗಳಾದ ಎಂ.ಎ.ಕೆ.ಅನ್ಸಾರಿ ಅವರು ಮಾತನಾಡುತ್ತ ಗುರುನಾನಕ ಶಾಲೆಯು ಶಿಸ್ತುಬದ್ಧವಾಗಿ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತದೆ ಎಂಬುದಕ್ಕೆ ಇವತ್ತಿನ ಈ ಕಾರ್ಯಕ್ರಮ ಕೂಡ ಒಂದು ಸಾಕ್ಷಿಯಾಗಿದೆ. ಬೀದರ ಜಿಲ್ಲೆಯ ಕೀರ್ತಿಯು, ಶಾಲೆಯ ಕೀರ್ತಿಯು ವಿಶ್ವಮಟ್ಟದಲ್ಲಿ ಬೆಳಗುವ ದಿಶೆಯಲ್ಲಿ ತಾವೆಲ್ಲರೂ ಕ್ರೀಡೆಯಲ್ಲಿ ಆಸಕ್ತಿ ತೋರಬೇಕು. ಪ್ರತಿಯೊಬ್ಬರು ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ಮಕ್ಕಳಿಗೆ ಸಲಹೆ ಮಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಗುರುನಾನಕ ಪಬ್ಲಿಕ್ ಶಾಲೆಯ ಉಪಾಧ್ಯಕ್ಷರಾದ ಡಾ॥ ರೇಷ್ಮಾ ಕೌರ ಅವರು ಮಾತನಾಡಿ, ಇಂದಿನ ಮಕ್ಕಳು ಹೆಚ್ಚಾಗಿ ಕಂಪ್ಯೂಟರ್, ಇಂಟರನೆಟ್ ಬಳಸುವತ್ತಲೇ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ. ಮನೆಯಲ್ಲಿ ಕುಳಿತು ಮೊಬೈಲ್‌ನಲ್ಲಿ ಗೇಮ್ ಆಡಿದರೆ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಸರಿಯಾಗಿ ಆಗುವುದಿಲ್ಲ. ಇದನ್ನು ಎಲ್ಲ ಪಾಲಕರು ಅರಿತು. ತಮ್ಮ ಮಕ್ಕಳಿಗೆ ಶಾಲೆಗಳಲ್ಲಿ ನಡೆಯುವ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಅವರಿಗೆ ಪ್ರೇರೇಪಿಸಬೇಕು ಎಂದು ಸಲಹೆ ಮಾಡಿದರು. ಮಕ್ಕಳು ಜಂಕ್ ಫೂಡ್ ತಿನ್ನಬಾರದು, ಹೆಚ್ಚಾಗಿ ಪೌಷ್ಠಿಕ ಆಹಾರ ಸೇವನೆ ಮಾಡಬೇಕು ಎಂದು ಕರೆಕೊಟ್ಟರು.

ಕಾರ್ಯಕ್ರಮದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಷಯ ಪರಿವೀಕ್ಷಕ ಎಂ.ಡಿ.ಫುರಖಾನ ಪಾಶಾ, ಪ್ರಾಂಶುಪಾಲರಾದ ನಲಿನಿ ಡಿ.ಜಿ., ಮುಖ್ಯಗುರುಗಳಾದ ಆರೀಫ್ ಹಾದಿ, ಡೀನ್ ಹನುಮಾನ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಕಲೆಗಳು ನಾಶವಾದರೆ ನಮ್ಮ ಸಂಸ್ಕೃತಿಯ ಬೇರುಗಳು ದುರ್ಬಲಗೊಳ್ಳುತ್ತವೆ : ಚಂದ್ರಕಾಂತ ಗಾದಗಿ



ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 25 : ಇಂದಿನ ಪೀಳಿಗೆಗೆ ನಾಡಿನ ಜಾನಪದ, ನೃತ್ಯ, ಸಂಗೀತ, ರಂಗಭೂಮಿ ಇತ್ಯಾದಿ ಕ್ಷೇತ್ರಗಳ ಪರಿಚಯ ಕಡಿಮೆಯಾಗುತ್ತಿದೆ. ಈ ಕಲೆಗಳು ನಾಶವಾದರೆ ನಮ್ಮ ಸಂಸ್ಕೃತಿಯ ಬೇರುಗಳು ದುರ್ಬಲಗೊಳ್ಳುತ್ತವೆ. ಆದ್ದರಿಂದ ಕಲಾವಿದರನ್ನು ಗುರುತಿಸಿ ಅವರಿಗೆ ಬೇಕಾದ ಪ್ರೋತ್ಸಾಹ ನೀಡಬೇಕಾಗಿದೆ ಎಂದು ಮಹಾದೇವ ಮಂದಿರದ ಅಧ್ಯಕ್ಷರಾದ ಚಂದ್ರಕಾಂತ ಗಾದಗಿ ಕಳವಳ ವ್ಯಕ್ತಪಡಿಸಿದರು.

ಬೀದರ ನಗರದ ಶಿವನಗರ ಕಾಲೋನಿಯ ಮಹಾದೇವ ಮಂದಿರದಲ್ಲಿ ಇತ್ತೀಚಿಗೆ ನಡೆದ ಶ್ರೀ ಕೇತಕಿ ಸಂಗಮೇಶ್ವರ ಕಲಾ ಸಾಹಿತ್ಯ ಜಾನಪದ ಕಲಾವಿದರ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ 2025–26ನೇ ಸಾಲಿನ ಸಾಮಾನ್ಯ ಯೋಜನೆಯಡಿಯಲ್ಲಿ ಪ್ರಾಯೋಜಿತ ಕಾರ್ಯಕ್ರವು, ನವರಾತ್ರಿ ಉತ್ಸವ ಅಂಗವಾಗಿ ಭವಾನಿ ಮಾತೆ ಉತ್ಸವ ಸಂಗೀತ ರಸಮಂಜರಿ ಕಾರ್ಯಕ್ರಮವು ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿ ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯ ವಿಜಯಕುಮಾರ್ ಸೋನಾರೆ ಅವರು ಮಾತನಾಡಿ, ಇಂದಿನ ಸಮಾಜದಲ್ಲಿ ಹೆಚ್ಚಿನವರು ಪಶ್ಚಿಮತ್ಯಾ ಸಂಸ್ಕೃತಿಗೆ ಮೊರೆ ಹೋಗಿ ನಮ್ಮದೇ ದೇಸಿ ಸಂಸ್ಕೃತಿ, ಪರಂಪರೆ ಮತ್ತು ಜಾನಪದ ಕಲೆಗಳನ್ನು ಮರೆಯುತ್ತಿರುವುದು ತುಂಬಾ ವಿಷಾದನೀಯ ಸಂಗತಿ. ನಮ್ಮ ಮೂಲಗಳು, ನಮ್ಮ ಹಳ್ಳಿ ಜಾನಪದ ಪರಂಪರೆ ಇವುಗಳನ್ನು ಉಳಿಸಿಕೊಂಡಾಗ ಮಾತ್ರ ನಿಜವಾದ ಸಂಸ್ಕೃತಿಯ ಸಾರ ಅರ್ಥಪೂರ್ಣವಾಗುತ್ತದೆ, ಎಂದು ಅಭಿಪ್ರಾಯಪಟ್ಟರು.

ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಖ್ಯಾತ ತಬಲಾ ವಾದಕಾರದ ಕಲ್ಯಾಣರಾವ ಪಾಟೀಲ್ ಗುಮ್ಮಾ, ಅವರು ಮಾತನಾಡಿ ಇಂದಿನ ದಿನಗಳಲ್ಲಿ ಕೆಲವರು ದುಶ್ಚಟ ಹಾಗೂ ಅನಗತ್ಯ ಪ್ರಭಾವಗಳಿಗೆ ಒಳಗಾಗುತ್ತಿದ್ದಾರೆ. ಯುವಕರು ದುಶ್ಚಟಗಳಿಗೆ ಬಲಿಯಾಗದೆ ಇಂತಹ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವದರಿಂದ ಅವರ ನಡೆ, ನುಡಿ, ಆಚಾರ, ವಿಚಾರ, ಬದಲಾವಣೆಗೊಂಡು ಉತ್ತಮ ಭವಿಷ್ಯ ನಿರ್ಮಾಣಕ್ಕೆ ಸಹಾಯಕವಾಗಲಿದೆ ಎಂದರು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ರಾಮ ಸಿಂಧೆ, ಅವರು ನಮ್ಮದೇ ಸಂಸ್ಕೃತಿಯನ್ನು ನಾವು ಮರೆಯಬಾರದು. ಜಾನಪದ ಕಲೆ ಮತ್ತು ಪರಂಪರೆ ನಮ್ಮ ಸಮಾಜದ ಆತ್ಮವಾಗಿದ್ದು, ಅದನ್ನು ಉಳಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಕಲಾವಿದರನ್ನು ಗುರುತಿಸಿ ಅವರನ್ನು ಮುಖ್ಯವಾಹಿನಿಗೆ ತರುವಲ್ಲಿ ನಮ್ಮ ಇಲಾಖೆ ಮಾಡುತ್ತಿದೆ ಎಂದರು.

ರಾಜೇಂದ್ರ ನಮೋಶಿ, ಪುಂಡಲೀಕರಾವ ಗುಮ್ಮಾ, ಮಾತನಾಡಿದರು, ಕಾಶಿನಾಥ ಬೆಲ್ದಾಳ, ವಿನಾಯಕ ಚೌದ್ರಿ, ಮುಂತಾದವರು ವೇದಿಕೆ ಮೇಲಿದ್ದರು.

ಸಂಗೀತ ರಸಮಂಜರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಲಾ ತಂಡಗಳಾದ ಡಾ. ಪಂಡಿತ, ಸಂಗೀತ ಸಾಹಿತ್ಯ ತಂಡದಿಂದ, ವಚನ ಗಾಯನ, ನಾಗೇಶ ಮಡಿವಾಳ ಸಂಗಡಿಗರಿಂದ ಜಾನಪದ ಗಾಯನ, ದತ್ತಾತ್ರಿ ವಿಳಾಸಪುರ ಸಂಗಡಿಗರಿಂದ, ತತ್ವಪದ ಗಾಯನ, ಶಿವಾಜಿರಾವ ಪಾಟೀಲ್ ಉಜನಿ, ಸಂಗಡಿಗರಿಂದ, ಭಕ್ತಿ ಗೀತೆ, ಶರಣು ಚಾಂಬೋಳೆ ಸಂಗಡಿಗರಿಂದ, ತಬಲಾ ವಾದನ, ವಿಜಯಕುಮಾರ್ ದುಬಲಗುಂಡಿ ಅವರಿಂದ ಹಾರ್ಮೋನಿಯಂ, ಗಂಗಾಧರ ಪಾಟೀಲ್ ಅವರಿಂದ ಭಾವಗೀತೆ, ಹೀಗೆ ಹಲವು ಕಲಾ ತಂಡಗಳು ಭಾಗವಹಿಸಿ ತಮ್ಮದೇ ಆದ ವೈಶಿಷ್ಟ್ಯಪೂರ್ಣ ಕಲೆಯನ್ನು ಪ್ರದರ್ಶಿಸಿದವು.

ಪ್ರಾರಂಭದಲ್ಲಿ ಕಾರ್ಯಕ್ರಮವು ಸಂಗಮೇಶ ಬೆಲ್ದಾಳ, ಸ್ವಾಗತಿಸಿ ನಿರೂಪಿಸಿದರು, ಶರಣು ವಂದಿಸಿದರು, ಅದೇ ಸಂದರ್ಭದಲ್ಲಿ ಮಹಾದೇವ ಮಂದಿರ ಆಡಳಿತ ಮಂಡಳಿ ಸದಸ್ಯರಿಗೆ ಸನ್ಮಾನಿಸಲಾಯಿತು. ಕಲಾವಿದರು, ಮಹಿಳೆಯರು, ಮಕ್ಕಳು ಉಪಸ್ಥಿತರಿದ್ದರು.

# ಧರ್ಮದ ಇತರೆ ಕಾಲಂನಲ್ಲಿ ಲಿಂಗಾಯತ ಬರೆಸಿ: ಓಂಪ್ರಕಾಶ ರೊಟ್ಟೆ



ಬೀದರ. ಸೆ. 25 :ಇಂದು ಬಹುತೇಕ ಯುವಕರು ರಾಜ್ಯದಲ್ಲಿ ಮತ್ತು ದೇಶದಲ್ಲಿ ಹಾದಿ ಹೆಣವಾಗುತ್ತಿದ್ದಾರೆ. ರಾಜಕಾರಣಿಗಳು, ಸ್ವಾರ್ಥ ಮಠಾಧೀಶರು ಯುವಕರ ಕೈಯಲ್ಲಿ ಉದ್ಯೋಗ ಕೊಡುವುದನ್ನು ಬಿಟ್ಟು ಧರ್ಮದ ಅಮಲನ್ನು ಏರಿಸಿ ಹಾದಿ ಬೀದಿಯಲ್ಲಿ ಧರ್ಮದ ಹೆಸರಿನ ಮೇಲೆ ಹೆಣ ಬೀಳುವಂತೆ ಮಾಡುತ್ತಿರುವುದು ದುರ್ದೈವದ ಸಂಗತಿಯಾಗಿದೆ ಎಂದು ವಿಶ್ವಗುರು ಬಸವ ಧರ್ಮ ಕೇಂದ್ರದ ಅಧ್ಯಕ್ಷ ಓಂಪ್ರಕಾಶ ರೊಟ್ಟೆ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಗುರುವಾರ ಕರೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಜಾತಿ ಜನಗಣತಿಯ 11ನೇ ಧರ್ಮದ ಇತರೆ ಕಾಲಂನಲ್ಲಿ ಕೇವಲ ಲಿಂಗಾಯತ ಎಂದೇ ಬರೆಸಬೇಕು. ಜಾತಿ ಕಾಲಂನಲ್ಲಿ ನಿಮ್ಮ ನಿಮ್ಮ ಜಾತಿಯ ಹೆಸರು ನಮೂದಿಸಬೇಕೆಂದು ಕರೆ ನೀಡಿದರು. ವೀರಶೈವರು ಹಾಗೂ ಹಿಂದೂವಾದಿಗಳು ಲಿಂಗಾಯತ ಧರ್ಮಕ್ಕೆ ವಿರೋಧ ಮಾಡುವುದು ಸಲ್ಲದು. ಪೂಜ್ಯ ಹಾನಗಲ್ಲ ಶ್ರೀಗಳು 1904ರಲ್ಲಿ ಬಸವ ತತ್ವದ ಏಳ್ಗೆಯ ಉದ್ದೇಶದಿಂದಲೇ ವೀರಶೈವ ಮಹಾಸಭೆ ಸ್ಥಾಪಿಸಿದರು. ಆದರೆ ಪಂಚಪೀಠಾಧೀಶರು ಮುಖ್ಯ ಉದ್ದೇಶವನ್ನೇ ಮರೆತು ಅದನ್ನು ಬೇರೆಡೆಗೆ ಕೊಂಡೊಯ್ದರು ಎಂದು ಅಸಮಾಧಾನ ಹೊರಹಾಕಿದರು.

ಮುಂದುವರೆದು ಮಾತನಾಡಿದ ರೊಟ್ಟೆಯವರು ಸಮಾಜದಲ್ಲಿ ಅಶಾಂತಿ ಮತ್ತು ಭಯದ ವಾತಾವರಣ ನಿರ್ಮಾಣ ಮಾಡುವುದನ್ನು ಬಿಟ್ಟು ವೀರಶೈವರು ಅಖಂಡ ಲಿಂಗಾಯತ ದರ್ಮ ಸ್ಥಾಪನೆಗೆ ಸಹಕರಿಸಬೇಕು. ಸಂವಿಧಾನದ 29 ಮತ್ತು 30ನೇ ಕಲಂ ಅಡಿಯಲ್ಲಿ ಲಿಂಗಾಯತ ಧರ್ಮವನ್ನು ಧಾರ್ಮಿಕ ಅಲ್ಪಸಂಖ್ಯಾತರ ಅಡಿಯಲ್ಲಿ ಮಾನ್ಯತೆ ಸಿಕ್ಕರೆ ವೀರಶೈವ ಸೇರಿದಂತೆ ಎಲ್ಲಾ ಒಳಪಂಗಡದವರಿಗೆ ಉಪಯೋಗವಿದೆ. ಆದರೆ ವೀರಶೈವರು ವಿರೋಧ ಮಾಡುತ್ತಿರುವುದು ಏಕೆ? ಎಂದು ಪ್ರಶ್ನೆ ಮಾಡಿದರು. ದೇಶದಲ್ಲಿ ಲಿಂಗಾಯತ ಯುವಕರನ್ನು ಮತ್ತೆ ಸನಾತನ ಸಂಸ್ಕೃತಿಗೆ ಒಯ್ದು ಅವರಲ್ಲಿ ಮೂಢನಂಬಿಕೆ, ಅಂಧಶ್ರದ್ಧೆ, ಧರ್ಮಾಂಧತೆ ಬೆಳೆಸಿ, ವರ್ಷವಿಡೀ ರಾಮ, ಹನುಮ, ಗಣೇಶನ ಹಬ್ಬ ಆಚರಿಸುವಂತೆ ಮಾಡಿ, ಯುವಕರನ್ನು ರಸ್ತೆ ಮೇಲೆಯೇ ನಿಲ್ಲಿಸಿ ಅವರ ಬದುಕು ಹಾಳುಗೆಡವುತ್ತಿದ್ದಾರೆ. ಲಿಂಗಾಯತರು ಎಚ್ಚರದಿಂದಿರಬೇಕೆಂದು ಹರಿಹಾಯ್ದರು. ಕಾವಿ, ಖಾಕಿ ಮತ್ತು ಖಾದಿಗಳ ಹೊಂದಾಣಿಕೆ ರಾಜಕಾರಣದಿಂದ ಇಂದಿನ ಯುವಕರ ಬದುಕು ಅಯೋಮಯವಾಗಿದೆ.

ಈ ನಿಟ್ಟಿನಲ್ಲಿ ಬಸವರಾಜ ಬೊಮ್ಮಾಯಿ, ಪ್ರಭಾಕರ ಕೋರೆ, ಯಡಿಯೂರಪ್ಪ, ಮುರುಗೇಶ ನಿರಾಣಿ, ಪ್ರತಾಪಸಿಂಹ ಮತ್ತು ಜಗದೀಶ ಶೆಟ್ಟರ್ ಸೇರಿದಂತೆ ಇನ್ನಿತರ ಜನಪ್ರತಿನಿಧಿಗಳು ಲಿಂಗಾಯತರನ್ನು ಒಗ್ಗೂಡಿಸುವ ಕಾರ್ಯ ಮಾಡಬೇಕೆ ವಿನಃ ಒಡೆಯುವ ಹುನ್ನಾರ ಮಾಡಬಾರದು ಎಂದರು.

2018ರಲ್ಲಿ ಸಿಎಂ ಸಿದ್ಧರಾಮಯ್ಯ ನೇತೃತ್ವದ ಸರ್ಕಾರ ನಿವೃತ್ತ ನ್ಯಾ. ನಾಗಮೋಹನದಾಸ ಅವರನ್ನೊಳಗೊಂಡ ತಜ್ಞರ ಸಮಿತಿಯು ಸಾವಿರಾರು ಪುಟಗಳ ಲಿಂಗಾಯತ ಧರ್ಮವು ಸಂವಿಧಾನಿಕವಾಗಿ ಅಲ್ಪಸಂಖ್ಯಾತ ಧಾರ್ಮಿಕ ಮಾನ್ಯತೆ ಪಡೆಯುವ ಎಲ್ಲಾ ಅರ್ಹತೆ ಹೊಂದಿದೆಯೆಂದು ವರದಿಯು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ. ಆದರೆ ಸಣ್ಣ ಕಾರಣ ಹೇಳಿ ಕೇಂದ್ರವು ವಾಪಸ್ ಕಳುಹಿಸಿದೆ. ಈ ವರದಿ ಪುನರ್ ಪರಿಶೀಲನೆ ಮಾಡಿ ಮತ್ತೆ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಇದ–ಕ್ಕೆ ಎಲ್ಲಾ ಪಕ್ಷದ ಲಿಂಗಾಯತ ನಾಯಕರು ಒಮ್ಮತದ ನಿರ್ಣಯ ಕೈಗೊಳ್ಳಬೇಕೆಂದು ರೊಟ್ಟೆ ತಿಳಿಸಿದರು.

# ಕೇವಲ 6 ತಿಂಗಳಲ್ಲಿ ಕಟ್ಟಡ ತಲೆಎತ್ತಿ ನಿಂತಿರುವುದು ಖುಷಿಯ ವಿಚಾರ : ನಮೋಶಿ




ಬೀದರ. ಸೆ. 25 : 7 ತಿಂಗಳ ಹಿಂದೆಯಷ್ಟೇ ನಮ್ಮ ಎಚ್.ಕೆ.ಇ ಸೊಸೈಟಿಯ ನ್ಯಾಷನಲ್ ಇಂಗ್ಲಿಷ್ ಮೀಡಿಯಂ ಪಬ್ಲಿಕ್ ಶಾಲೆಗೆ 10 ಕೊಠಡಿಗಳ ಅವಶ್ಯಕತೆ ಇದೆ ಅಂತ ರಜನೀಶ್ ವಾಲಿಯವರು ಕೇಳಿದ್ರು, ಹೂ ಅಂತ ಹೇಳಿ ಗುದ್ದಲಿ ಪೂಜೆ ಮಾಡಿ ಕೇವಲ 6 ತಿಂಗಳಲ್ಲಿ ಆ ಕಟ್ಟಡ ತಲೆಎತ್ತಿ ನಿಂತಿದೆ ಎಂದು ಎಚ್.ಕೆ.ಇ ಸೊಸೈಟಿಯ ಅಧ್ಯಕ್ಷ ಹಾಗೂ ವಿಧಾನಪರಿಷತ್ ಸದಸ್ಯ ಶಶಿಲ್ ನಮೋಶಿ ತಿಳಿಸಿದರು.

ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಬಿ.ವಿ.ಭೂಮರೆಡ್ಡಿ ಶಾಲಾ ಕಾಲೇಜಿನ ಆವರಣದಲ್ಲಿರುವ ನ್ಯಾಷನಲ್ ಇಂಗ್ಲಿಷ್ ಮೀಡಿಯಂ ಪಬ್ಲಿಕ್ ಶಾಲೆಯ ನೂತನವಾಗಿ ನಿರ್ಮಿಸಿದ ಕೊಠಡಿಗಳನ್ನ ಉದ್ಘಾಟಿಸಿ ಮಾತನಾಡಿದ ಅವರು, ನಗರದ ಭೂಮರೆಡ್ಡಿ ಶಿಕ್ಷಣ ಸಂಸ್ಥೆಗೆ ಬೀದರ್ ನಲ್ಲಿ ಒಳ್ಳೆಯ ಹೆಸರಿದೆ. ಆ ಕಾರಣದಿಂದಲೇ ಸಂಸ್ಥೆಯ ಬೆಳವಣಿಗಾಗಿ ನಾವು ಹತ್ತಾರು ಕೋಟಿ ಹಣವನ್ನು ನೀಡುತ್ತಿದ್ದೇವೆ. ಎಚ್.ಕೆ.ಇ ಸೊಸೈಟಿಯ ಆಡಳಿತ ಮಂಡಳಿ ಸದಸ್ಯರಾದ ರಜನೀಶ್ ವಾಲಿಯವರು ಆ ಹಣವನ್ನು ಸರಿಯಾದ ರೀತಿ ಸದ್ಬಳಕೆ ಮಾಡಿಕೊಂಡು ಸಂಸ್ಥೆಯ ಅಭ್ಯುದಯಕ್ಕಾಗಿ ಶ್ರಮಿಸುತ್ತಿದ್ದಾರೆ. ಸರ್ಕಾರದಿಂದಲೂ ಸಹ ಅನುದಾನವನ್ನ ತಂದು ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ.

ಸೈನಿಕ ಶಾಲೆಯ ಕಟ್ಟಡ ನಿರ್ಮಾಣಕ್ಕೆ ಕನಿಷ್ಠ 22 ಕೋಟಿ ಬೇಕು, ಅದನ್ನ ಸಮರ್ಪಕವಾಗಿ ಒದಗಿಸಿ ಒಂದು ಮಾದರಿ ಕಟ್ಟಡವನ್ನಾಗಿ ನಿರ್ಮಿಸಿ. ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರ ಕೈಯಲ್ಲಿ ಉದ್ಘಾಟಿಸುವ ಕಾರ್ಯ ಮಾಡೋಣ ಎಂದರು.

ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಮಾತನಾಡಿ, ಈ ಹಿಂದೆ ಎಚ್.ಕೆ.ಇ ಸೊಸೈಟಿಯ ಅಧ್ಯಕ್ಷರಿದ್ದವರು ಸುಣ್ಣ ಹಚ್ಚಬೇಕು ಅಂದ್ರು, ಭೂಮರೆಡ್ಡಿ ಸಂಸ್ಥೆಯಲ್ಲಿ ಆದಾಯ ಇಲ್ಲ ಅಂತಿದ್ರು, ಆದರೆ ನಮೋಶಿ ಅವರು ಇಷ್ಟೆಲ್ಲ ಅನುದಾನ ನೀಡಿ. ಈ ಅಭಿವೃದ್ಧಿಗೆ ಸಹಕರಿಸಿದಕ್ಕೆ ಧನ್ಯವಾದಗಳು. ಅದೇ ರೀತಿ ರಜನೀಶ್ ವಾಲಿಯವರು ಸಹ ಚಾಣಾಕ್ಷತನದಿಂದ ಒಳ್ಳೆಯ ಅನುದಾನ ತಂದು ಸಂಸ್ಥೆಯ ಅಭಿವೃದ್ಧಿ ಮಾಡ್ತಿದ್ದಾರೆ ಎಂದರು.

ಎಚ್.ಕೆ.ಇ ಸೊಸೈಟಿಯ ಆಡಳಿತ ಮಂಡಳಿ ಸದಸ್ಯ ಹಾಗೂ ಬಿ.ವಿ.ಭೂಮರೆಡ್ಡಿ ಆವರಣದ ಶಾಲಾ ಕಾಲೇಜಿನ ಸಂಚಾಲಕರಾದ ಡಾ. ರಜನೀಶ್ ವಾಲಿ ಮಾತನಾಡಿ, ಸೈನಿಕ ಶಾಲೆಯ ಕಟ್ಟಡ ಕಾಮಗಾರಿ 2024ರ ಆಗಸ್ಟ್‌ರಲ್ಲಿ ಪ್ರಾರಂಭವಾಗಿದ್ದು, ಇನ್ನು 3,4 ತಿಂಗಳಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಳ್ಳಲಿದೆ. ಸೈನಿಕ ಶಾಲೆಯ ಕಟ್ಟಡದಿಂದ ಮುಖ್ಯರಸ್ತೆಗೆ 1 ಕೋಟಿ ಅನುದಾನದಲ್ಲಿ 60 ಫೀಟ್ ರೋಡ್ ಮಾಡಲಾಗುತ್ತಿದೆ. ದೇಶದಲ್ಲಿ ಪ್ರಾರಂಭವಾದ ಒಟ್ಟು 27 ಸೈನಿಕ ಶಾಲೆಯೊಂದಿಗೆ ಪ್ರಾರಂಭವಾದ ನಮ್ಮ ಸೈನಿಕ ಶಾಲೆ ಇವತ್ತು 5ನೇ ರ್‍ಯಾಂಕ್ ಪಡೆದಿರುವುದು ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಚಾರ ಎಂದರು.

ಈ ವೇಳೆ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಹಾಗೂ ಭೂಮರೆಡ್ಡಿ ಶಾಲಾ ಕಾಲೇಜಿನ ಅವಣದಲ್ಲಿರುವ ಶಿಕ್ಷಣ ಸಂಸ್ಥೆಯ ಸಿಬ್ಬಂಧಿಗಳು ಉಪಸ್ಥಿತರಿದ್ದರು.

# ಸೇಡಂ ಮತ್ತು ಚಿಂಚೋಳಿ ಅತಿವೃಷ್ಟಿ ಪ್ರದೇಶ ಘೋಷಿಸಿ: ಸಂಚಾರ ತಡೆದು ಪ್ರತಿಭಟನೆ



ಸೇಡಂ, ಸೆ, 25, ಅತಿವೃಷ್ಟಿ ಇಂದ ರೈತರು ಸಂಕಷ್ಟದಲ್ಲಿದ್ದಾರೆ ಆದಷ್ಟು ಬೇಗನೆ ಕಲಬುರ್ಗಿ ಜಿಲ್ಲೆಯನ್ನು ಅತಿವೃಷ್ಟಿ ಪೀಡಿತ ಪ್ರದೇಶವೆಂದು ಘೋಷಿಸಿ, ರೈತರ ಖಾತೆಗೆ ಪರಿಹಾರ ಹಣ ಜಮಾ ಮಾಡಬೇಕೆಂದು ಮಾಜಿ ಶಾಸಕ ರಾಜಕುಮಾರ ಪಾಟೀಲ ತೆಲ್ಕೂರ ಆಗ್ರಹ.ಚಿಂಚೋಳಿ ಕ್ರಾಸ್ ಹತ್ತಿರ ಸಂಚಾರ ತಡೆದು ಪ್ರತಿಭಟನೆ ಮಾಡಿ ಮಾನ್ಯ ಸಹಾಯಕ ಆಯುಕ್ತರು ಸೇಡಂ ರವರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿ ತಾಲ್ಲೂಕಿನಲ್ಲಿ ರೈತರು ಅತಿವೃಷ್ಟಿ ಇಂದ ಸಂಕಷ್ಟದಲ್ಲಿದ್ದಾರೆ ಪ್ರತಿ ಒಂದು ಎಕ್ರೆಗೆ ಇಪ್ಪತ್ತೈದು ಸಾವಿರ ರೂಪಾಯಿ ಪರಿಹಾರ ನೀಡಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಪಕ್ಷದ ಹಿರಿಯ ಮುಖಂಡರು ಮಂಡಲ ಅಧ್ಯಕ್ಷರು ಪದಾಧಿಕಾರಿಗಳು, ರೈತರು ಇನ್ನಿತರರು ಇದ್ದರು

ಯಶಸ್ವಿಯಾಗಿ ಜರುಗಿದ ನಿರ್ಣಾ ಪಿಕೆಪಿಎಸ್ ವಾರ್ಷಿಕ ಮಹಾಸಭೆ

# ಠೇವಣಿ ಸಂಗ್ರಹಣೆಯಲ್ಲಿ ಹೆಚ್ಚಳ, ಕೃಷಿಗೆ ಮೊದಲ ಆದ್ಯತೆ:- ಜಗನ್ನಾಥರೆಡ್ಡಿ ಏಖೇಳ್ಳಿ

(ರಾಜಕುಮಾರ.ಆರ್.ಹಡಪದ)

ಮಲ್ಲಮ್ಮ ನುಡಿ ವಾರ್ತೆ





ಸಂಘದ ವತಿಯಿಂದ ಬಿಗ್ ಬಜಾರ್ ಪ್ರಾರಂಭಿಸಬೇಕೆಂಬ ಉದ್ದೇಶವಿದೆ, ಈ ಬಗ್ಗೆ ಮುಂದಿನ ಆಡಳಿತ ಸದಸ್ಯರ ಸಭೆಯಲ್ಲಿ ಮಂಡಿಸುತ್ತೇನೆ. ಸಭೆಯಲ್ಲಿ ಅನುಮೋದನೆ ನೀಡಿದರೆ ಜಿಲ್ಲೆಯಲ್ಲಿಯೇ ಮಾದರಿಯ ಬಿಗ್ ಬಜಾರ್ ಶೀಘ್ರದಲ್ಲೇ ಪ್ರಾರಂಭಿಸಲು ಶ್ರಮಿಸುತ್ತೇನೆ.

-ಜಗನ್ನಾಥರೆಡ್ಡಿ ಏಖೇಳ್ಳಿ
ಅಧ್ಯಕ್ಷ ಪಿಕೆಪಿಎಸ್ ನಿರ್ಣಾ

ಚಿಟಗುಪ್ಪ:- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 2024-25ನೇ ಸಾಲಿನಲ್ಲಿ ಸಂಘವು ಗೊತ್ತು ಪಡಿಸಿದ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಸಂಪನ್ಮೂಲಗಳ ಸಂಗ್ರಹಣೆ ಹಾಗೂ ಠೇವಣಾತಿ ಸಂಗ್ರಹಣೆ ಹೆಚ್ಚಳ ಸಾಧಿಸಿದೆ ಎಂದು ಪಿಕೆಪಿಎಸ್ ಅಧ್ಯಕ್ಷ ಜಗನ್ನಾಥರೆಡ್ಡಿ ಏಖೇಳ್ಳಿ ತಾಲೂಕಿನ ನಿರ್ಣಾ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 68ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ತಿಳಿಸಿದರು. ಸಂಘದ ದುಡಿಯುವ ಬಂಡವಾಳ 1,651.84 ಲಕ್ಷ ರೂಪಾಯಿ ಒಟ್ಟು ಠೇವಣಿ ರೂಪಾಯಿ 417.58 ಲಕ್ಷ ಇದೆ ಎಂದರು. 2024-25ನೇ ಸಾಲಿನಲ್ಲಿ 813.80. ಲಕ್ಷ ರೂಪಾಯಿ ರೈತರಿಗೆ ಸಾಲ ವಿತರಣೆ ಮಾಡಿದ್ದೇವೆ. 1558 ಜನ ರೈತರಿಗೆ 761.58 ಲಕ್ಷ ರೂಪಾಯಿ ಸಾಲವನ್ನು ಸರ್ಕಾರಿ ಬಡ್ಡಿ ರಿಯಾಯಿತಿ ಶೂನ್ಯ ಶೇಕಡಾದಲ್ಲಿ 3 ಲಕ್ಷ ರೂಪಾಯಿ ಕೃಷಿ ಸಾಲ ವಿತರಿಸಲಾಗಿದೆ ಎಂದರು. ಸಂಘವು 467 ಜನ ಸದಸ್ಯರಿಂದ ಪ್ರಾರಂಭವಾದ ಸಂಘ 2497 ಸದಸ್ಯರು ಹೊಂದಿದ್ದಾರೆ ಎಂದರು. ಪ್ರಾರಂಭದಲ್ಲಿ 2,00,178. ಷೇರು ಹೊಂದಿದ್ದು ಇಂದು 1,08,41,933 ಷೇರು ಹೊಂದಿದೆ. ನಿರ್ದೇಶಕರ ಮತ್ತು ರೈತ ಷೇರುದಾರರ ಸಹಕಾರದಿಂದ ಸಂಘ ನಿವ್ವಳ ಲಾಭದತ್ತ ಸಾಗಿದೆ. 2024-25ನೇ ಸಾಲಿನಲ್ಲಿ 2,46,990.03 ಲಾಭ ಪಡೆದಿದೆ ಎಂದರು. ದೇಶದಲ್ಲಿ ಯೂರಿಯಾ ಗೊಬ್ಬರ ಅಭಾವದಿಂದಾಗಿ ರೈತರು ತೆ-ೂಂದರೆ ಅನುಭವಿಸಿದ್ದಾರೆ ಮುಂದಿನ ದಿನಗಳಲ್ಲಿ ರೈತರಿಗೆ ರಸಗೊಬ್ಬರ ಕೊರತೆಯಾಗದಂತೆ ಶಕ್ತಿ ಮೀರಿ ಶ್ರಮಿಸಿ ನಮ್ಮ ಸಹಕಾರಿ ಸಂಘಕ್ಕೆ ಹೆಚ್ಚಿನ ರಸಗೊಬ್ಬರ ತರಿಸಲು ಶ್ರಮಿಸುತ್ತೇನೆ ಎಂದು ಸಭೆಯಲ್ಲಿ ತಿಳಿಸಿದರು. ಈ ವಾರ್ಷಿಕ ಮಹಾಸಭೆಯಲ್ಲಿ ರೈತರು ಹಲವಾರು ಸಲಹೆ ಸೂಚನೆಗಳನ್ನು ನೀಡಿದರು. ಈ ಒಂದು ಸಂಘ ಷೇರುದಾರ ಸಹಕಾರದಿಂದ ರಾಜ್ಯದಲ್ಲಿಯೇ ಈ ಸಂಘ ಮಾದರಿಯ ಸಂಘ ಮಾಡಲು ಶ್ರಮಿಸುವುದಾಗಿ ಜಗನ್ನಾಥರೆಡ್ಡಿ ಏಖೇಳ್ಳಿ ಸಭೆಯಲ್ಲಿ ಘೋಷಿಸಿದರು. 2024-25ನೇ ಸಾಲಿನ ವಾರ್ಷಿಕ ಖರ್ಚು ವೆಚ್ಚದ ವರದಿಯನ್ನು ಮುಖ್ಯ ಕಾರ್ಯನಿರ್ವಾಹಕ ನಾಗಪ್ಪ ಅಂಬಾಡಿ ಸಂಕ್ಷಿಪ್ತವಾಗಿ ವಿವರಿಸಿದರು. ಸಂಘದ ಉಪಾಧ್ಯಕ್ಷ ಮಲ್ಲಪ್ಪ ಕೋರಿ, ನಿರ್ದೇಶಕರಾದ ಕೃಷ್ಣಾರೆಡ್ಡಿ ಲಚನಗಾರ, ಚಂದ್ರಶೇಖರ ನಾಗವಾರ್, ವಿಜಯಕುಮಾರ ಯಲ್ಲಗುರ್ತಿ, ತಿಪ್ಪಣ್ಣಶಾರಾ, ಎಂ.ಡಿ. ರಸೂಲ್ ಅಹ್ಮದ್ ಖಾಜಾಸಾಬ್ ಲಶ್ಕೇರಿ, ಚಂದ್ರಶೇಖರ ಪಾಟೀಲ್, ರಂಗಮ್ಮ ಗಂಪಲ್ಲಿ, ಲಕ್ಷ್ಮೀಬಾಯಿ ಅವಂಟಿ, ಹಣಮಂತರೆಡ್ಡಿ ವಾಲೆ, ಸಿಬ್ಬಂದಿಗಳಾದ ಲಕ್ಷ್ಮಿ ಮಠಪತಿ, ಚಂದ್ರಕಲಾ ಮಲ್ಲಪ್ಪನೋರ್, ಸುಧಾಕರ್ ಹಲಗಿ, ಶ್ರೀಕಾಂತರೆಡ್ಡಿ ಗುಡಾಡಿ, ಶಾಮರಾವ ಬಿಜಾಪುರ, ಜಗನ್ನಾಥ ರಾಯಗೊಂಡ ಪ್ರಮುಖರಾದ ಯಾಮರೆಡ್ಡಿ ಮೋಹನರೆಡ್ಡಿ, ಭರತ್ ರೆಡ್ಡಿ ಚಿಟನಳ್ಳಿ, ಅಶೋಕ ಕಾಗೆ, ಶಂಕರರಾವ ಹೊಳಕುಂದಿ, ಅಶೋಕ ಪಾಟೀಲ್, ರಾಮರೆಡ್ಡಿ ಚವಲಾ, ಮೈನೋದ್ದಿನ ಮಚಕುರಿ, ರಾಜಕುಮಾರ್ ತೆಳಮನಿ, ಶಿವಕುಮಾರ್ ಹೊಳಕುಂದಿ, ಸೇರಿದಂತೆ ರೈತರು ಉಪಸ್ಥಿತರಿದ್ದರು.

ಜಿಲ್ಲಾ ಮಟ್ಟದ ಜಾಗೃತಿ ನಿಯಂತ್ರಣ ಸಭೆ -10 ಪ್ರಕರಣಗಳಿಗೆ ಶಿಕ್ಷೆ

# ದೌರ್ಜನ್ಯ ಪ್ರಕರಣದಡಿ 44.25 ಲಕ್ಷ ಪರಿಹಾರ ವಿತರಣೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.25-ಪ್ರಸಕ್ತ ಸಾಲಿನ ಆಗಷ್ಟ ಅಂತ್ಯಕ್ಕೆ 30 ದೌರ್ಜನ್ಯ ಪ್ರಕರಣಗಳ ಪೈಕಿ 26 ಪ್ರಕರಣಗಳಿಗೆ 44.25 ಲಕ್ಷ ರೂ.ಗಳ ಪರಿಹಾರಧನ ವಿತರಣೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾ ಮಟ್ಟದ ಜಾಗೃತಿ ನಿಯಂತ್ರಣ ಹಾಗೂ ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸಕ್ತ ಸಾಲಿಗೆ 104 ಲಕ್ಷ ರೂ.ಗಳ ಅನುದಾನ ಬಿಡುಗಡೆ-ಯಾಗಿದ್ದು, ಈ ಪೈಕಿ ಹಿಂದಿನ ಪ್ರಕರಣಗಳಿಗೆ 63.75 ಲಕ್ಷ ರೂ.ಗಳ ಪರಿಹಾರಧನ ನೀಡಲಾಗಿದೆ. ಪ್ರಸಕ್ತ ಸಾಲಿಗೆ 30 ಪ್ರಕರಣಗಳ ಪೈಕಿ 26 ಪ್ರಕರಣಗಳಿಗೆ 44.25 ಲಕ್ಷ ರೂ.ಗಳ ಪರಿಹಾರಧನ ವಿತರಿಸಲಾಗಿದೆ. ಬಾಕಿ ಉಳಿದ ಪ್ರಕರಣಗಳಿಗೆ ಪರಿಹಾರಧನ ನೀಡಲು ಅನುದಾನಕ್ಕೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ದೌರ್ಜನ್ಯ ಪ್ರಕರಣಗಳ ತನಿಖೆ ಚುರುಕುಗೊಳಿಸಿ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲು ಕ್ರಮಕೈಗೊಳ್ಳಬೇಕು ಎಂದ ಜಿಲ್ಲಾಧಿಕಾರಿಗಳು, ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಪರಿಶೀಲನೆ ಮಾಡಿದರು. ದಾಖಲಾದ ಒಟ್ಟು 30 ಪ್ರಕರಣ ಪೈಕಿ 15 ಪ್ರಕರಣಗಳ ಕುರಿತು ನ್ಯಾಯಾಲಯಕ್ಕೆ ದೋಷರೋಪನೆ ಸಲ್ಲಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 10 ಪ್ರಕರಣಗಳಿಗೆ ಶಿಕ್ಷೆ ಆಗಿದೆ. ಉಪವಿಭಾಗ ಮತ್ತು ತಹಶೀಲ್ದಾರ ಹಂತದಲ್ಲಿ ಜಾಗೃತಿ ನಿಯಂತ್ರಣ ಸಮಿತಿ ಸಭೆ ನಡೆಸಿ, ಸಭೆಯ ನಡಾವಳಿಯನ್ನು ಪಡೆದುಕೊಂಡು ಜಿಲ್ಲಾ ಸಮಿತಿಗೆ ಸಲ್ಲಿಸುವಂತೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಿಗೆ ಸೂಚನೆ ನೀಡಿದರು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣಕ್ಕಾಗಿ ಕಾಯ್ದಿರಿಸಿದ ಅನುದಾನದಲ್ಲಿ ಶೇ.25 ರಷ್ಟು ಖರ್ಚು ಮಾಡಬೇಕಾಗಿದ್ದು, ಅಮೀನಗಡ, ಲೋಕಾಪೂರ ಪಟ್ಟಣ ಪಂಚಾಯತ ಹಾಗೂ ಮಹಾಲಿಂಗಪುರ ಪುಸರಭೆಗಳು ಕಡಿಮೆ ಪ್ರಗತಿ ಸಾಧಿಸಿವೆ. ಎಸ್.ಎಫ್.ಸಿ ಅನುದಾನದಲ್ಲಿ ಮುಖ್ಯವಾಗಿ ಕುಡಿಯುವ ನೀರು, ಶೌಚಾಲಯ ಹಾಗೂ ಚರಂಡಿಗಳಿಗೆ ಖರ್ಚು ಮಾಡಬೇಕು. ನಂತರ ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಬಳಕೆ ಮಾಡುವಂತೆ ಸೂಚಿಸಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ಅಂಬೇಡ್ಕರ ಅಭಿವೃದ್ಧಿ ನಿಗಮದಲ್ಲಿ ಬಾಕಿ ಇರುವ 33 ಬೋರವೆಲ್‌ಗಳಿಗೆ ವಿದ್ಯುದ್ದೀಕರಣ ಕಲ್ಪಿಸಲಾಗಿದ್ದು, ಎಪ್ರೀಲ್ ಮತ್ತು ಮೇ ತಿಂಗಳಲ್ಲಿ ಕೊರೆದ 30 ಬೋರವೆಲ್‌ಗಳಿಗೆ ವಿದ್ಯುದ್ದೀಕರಣಕ್ಕೆ ಹೆಸ್ಕಾಂ ಹಂತದಲ್ಲಿ ಬಾಕಿ ಉಳಿದಿವೆ. ಅದೇ ರೀತಿ ಭೋವಿ ಅಭಿವೃದ್ಧಿ ನಿಗಮದಲ್ಲಿ ವಿದ್ಯುದ್ದೀಕರಣಕ್ಕೆ ಯಾವುದೇ ಬಾಕಿ ಇರುವದಿಲ್ಲ. ಆದಿ ಜಾಂಬವ ಅಭಿವೃದ್ಧಿ ನಿಗಮಗಳಲ್ಲಿ 26 ಮಾತ್ರ ಬಾಕಿ ಇರುತ್ತದೆ. ಬೋರವೆಲ್ ಕೊರೆದ ತಕ್ಷಣ ವಿದ್ಯುದ್ದೀಕರಣಕ್ಕೆ ನಿಗಮದ ಅಧಿಕಾರಿಗಳು ಕ್ರಮವಹಿಸಬೇಕು ಎಂದರು.

ನಾಮನಿರ್ದೇಶಿತ ಸದಸ್ಯರು ಸಭೆಯ ಗಮನಕ್ಕೆ ತಂದ ಸಮಸ್ಯೆಗಳಿಗೆ ಜಿಲ್ಲಾಧಿಕಾರಿಗಳು ಸ್ಪಂದಿಸಿ, ಸೂಕ್ತಕ್ರಮವಹಿಸುವುದಾಗಿ ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿ.ಪಂ ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಎಂ., ನಾಮ ನಿರ್ದೇಶಿತ ಸದಸ್ಯರಾದ ಯಮನಪ್ಪ ಪೂಜಾರ, ಶಿವಾನಂದ ಮಾದರ, ಫಕೀರಪ್ಪ ಮಾದರ, ಬಸವರಾಜ ಪಾತ್ರೋಟ, ಗೋವಿಂದಪ್ಪ ಕೌಲಗಿ, ದ್ಯಾಮಣ್ಣ ಗಾಳಿ ಇದ್ದರು.

# ಜಾನುವಾರುಗಳಿಗೆ ಚರ್ಮ ಗಂಟು ರೋಗದ ಲಸಿಕೆ ಚಾಲನೆ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ : - ಸೆ 25 ತಾಲೂಕಿನ ಹಾರಕೂಡ ಪಶು ಚಿಕಿತ್ಸಾಲಯ ವತಿಯಿಂದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರಿಂದ ಗೋಮಾತೆಗೆ ಪೂಜೆ ಸಲ್ಲಿಸಿ ಜಾನುವಾರಗಳಿಗೆ ಚರ್ಮಗಂಟು ರೋಗದ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಜಿಲ್ಲಾ ಪಂಚಾಯಿತಿ ನಿವೃತ್ತ ಉಪ ಕಾರ್ಯದರ್ಶಿಗಳಾದ ಬಿ.ಕೆ. ಹಿರೇಮಠ, ಮುಖ್ಯ ಪಶು ವೈದ್ಯಾಧಿಕಾರಿ ಡಾ. ಮಂಜುನಾಥ ಹಳ್ಳಿ, ಹಾರಕೂಡ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಹಾದೇವ ಪೂಜಾರಿ, ಪಶು ವೈದ್ಯಕೀಯ ಪರೀಕ್ಷಕರಾದ ಮಲ್ಲಿಕಾರ್ಜುನ ಹತ್ತರಕೆ.

ಕಾರ್ಯಕ್ರಮದಲ್ಲಿ ಮುಖ್ಯ ಪಶುವೈದ್ಯಾಧಿಕಾರಿಗಳಾದ ಮಂಜುನಾಥ ಹಳ್ಳಿ ಮಾತನಾಡಿ ರೈತರು ತಮ್ಮ ರಾಸುಗಳಿಗೆ ಘನ ಸರ್ಕಾರದ ವತಿಯಿಂದ ಉಚಿತವಾಗಿ ನೀಡುತ್ತಿರುವ ಚರ್ಮ ಗಂಟು ರೋಗದ ಲಸಿಕೆ ಹಾಕಿಸಬೇಕೆಂದು ಮನವಿ ಮಾಡಿಕೊಂಡರು.

ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದ ಚರ್ಮ ಗಂಟು ರೋಗದ ಲಸಿಕೆ(ಐಣಟಠಿಥಿ ಖಇುಟಿ ಆಜಭೆಜ ಗಿಚಿಛಿಛಿಟಿಜ) ನೀಡುವ ಕಾರ್ಯಕ್ರಮವು ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಡೆಯುತ್ತಿದ್ದು, ಬುಧವಾರ ರಂದು ಹಾರಕೂಡ ಗ್ರಾಮದ ರಾಸುಗಳಿಗೆ ಲಸಿಕೆ ನೀಡಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು ಹಾಗೂ ಗ್ರಾಮಸ್ಥರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಬಸವಕಲ್ಯಾಣ :- ಇಲ್ಲಿನ ಅಕ್ಕ ಮಹಾದೇವಿ ಕಾಲೇಜಿನ ಆವರಣದಲ್ಲಿ ನಡೆಯುತ್ತಿರುವ ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರುಗಳವರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ ಅಲ್ಲದೆ ಬಿಕೆಡಿಬಿ ಯಲ್ಲಿ ಇಷ್ಟಲಿಂಗ ಮಹಾಪೂಜೆ ಅಲ್ಲದೆ ಸಂಬಂಧ ಪಟ್ಟ ಅನೇಕ ಸುದ್ದಿಗಳನ್ನು ಪ್ರಕಟಿಸಿರುವ ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನಪತ್ರಿಕೆಯನ್ನು ಪೀಠದ ವಾರ್ತಾ ಸಂಯೋಜನಾಧಿಕಾರಿ ಶ್ರೀ ಸಿ. ಎಚ್. ಬಾಳನಗೌಡರ್ ವರಿಗೆ ವರದಿಗಾರರಾದ ಡಿ. ಕೆ. ಪ್ರಹ್ಲಾದ ಜಿ. ಪತ್ರಿಕೆ ನೀಡುತ್ತಿರುವ ದೃಶ್ಯ ಕಾಣಬಹುದು. (ಮಲ್ಲಮ್ಮ ನುಡಿ ಚಿತ್ರ)

: C I T A T I O N:

IN THE COURT OF THE PRL, CIVIL JUDGE AND JMFC., AT HUMNABAD.

CRL. MISC. No. 1035/2025.

Petitioners:

1. Shivamma W/o Pundlik, Age: 75-yrs. Occu: Household.
R/o Hallikhed-B. Tq. Humnabad.
2. Sharnamma W/o Laxuman, Age: 72-yrs. Occu: Household.
R/o Chandanhalli. Tq. Humnabad.

Respondent:

The Registrar of Birth and Death through The Chief officer TMC Hallikhed-B.
Tq. Humnabad.

Sub:- Petition U/Sec. 13(3) of Birth and Death Registration Act-1969

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father in law of petitioner No.1 and 2 by namely LATE. PARASAPPA S/O TUKARAM, who was died on 19.11.1975 at Village Hallikhed-B. Tq.Humnabad Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 27.10.2025 at 11.00 AM in person or any authorized pleader to answer such claim otherwise the matter will be heard and determined in your absence as per law.


Given under my hand and seal of he court, this the 20-09-2025

//By order of the court//
Chief Ministerial Officer,
Prl. Civil Judge & JMFC Court, Humnabad.



ಬಸವಕಲ್ಯಾಣ :- ಇಲ್ಲಿನ ಬಿಕೆಡಿಬಿ ಕಲ್ಯಾಣ ಮಂಟಪದಲ್ಲಿ ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರುಗಳಾದ ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರು ನವರಾತ್ರಿ ದಸರಾ ಧರ್ಮ ಸಮ್ಮೇಳನದ ಅಂಗವಾಗಿ ಜರುಗಿದ ನಾಲ್ಕನೇ ದಿನದ ಇಷ್ಟಲಿಂಗ ಮಹಾಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ತಡೂಳಾ ಪೂಜ್ಯಶ್ರೀ ರಾಜೇಶ್ವರ ಶಿವಾಚಾರ್ಯರು. ಸೇರಿದಂತೆ ಅನೇಕರ ಪೂಜ್ಯರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಕೆಂಭಾವಿ ಠಾಣೆಯ ಪಿಎಸ್ಐವಿರುದ್ಧ ನಗರದ ಎಸ್ ಪಿ ಕಚೇರಿ ಮುಂದೆ ಜಯಕರ್ನಾಟಕ ಜನಪರ ವೇದಿಕೆ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಸುರಪುರ ತಾಲೂಕಿನ ನಗನೂರು ಗ್ರಾಮದಲ್ಲಿ ನಡೆದ ಹನಿಟ್ರ್ಯಾಪ್ ಪ್ರಕರಣ ಒಂದಕ್ಕೆ ಸಂಬಂಧಿಸಿದಂತೆ ಏಳು ಜನರ ವಿರುದ್ಧ ಪ್ರಕರಣ ದಾಖಲಾಗಿದ್ದು ಅದರಲ್ಲಿ ಕೇವಲ ಮೂರು ಜನ ಆರೋಪಿಗಳನ್ನು ಮಾತ್ರ ಬಂಧಿಸಿ ಇನ್ನುಳಿದ ನಾಲ್ಕು ಜನ ಆರೋಪಿಗಳನ್ನು ಬಂಧಿಸದೆ ಕೆಂಭಾವಿ ಪೊಲೀಸ್ ಠಾಣೆಯ ಪಿಎಸ್ಐ ಅವರು ಕರ್ತವ್ಯ ಲೋಪ ಎಸಗಿದ್ದಾರೆ ಎಂದು ಆರೋಪಿಸಿ ಜಯ ಕರ್ನಾಟಕ ಜನಪರ ವೇದಿಕೆ ಸಂಘಟನೆಯಿಂದ ಯಾದಗಿರಿ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಮುಂದೆ ಬುಧವಾರ ಮಧ್ಯಾಹ್ನ ಪ್ರತಿಭಟನೆ ನಡೆಸಿ ಕೆಂಭಾವಿ ಠಾಣೆ ಪಿಎಸ್ಐ ಅವರನ್ನು ಅಮಾನತು ಮಾಡುವಂತೆ ಒತ್ತಾಯಿಸಲಾಗಿದೆ. ಎಸ್ಪಿ ಅವರಿಗೆ ಬರೆದ ಮನವಿ ಡಿವೈಎಸ್ಪಿ ಜಾವೇದ್ ಇನಾಂದಾರ್ ಮೂಲಕ ಸಲ್ಲಿಸಿದರು. ಈ

# ಮನಗೂಳಿ ಕಾಲೇಜಿನಲ್ಲಿ ವಿಶ್ವ ಫಾರ್ಮಾಸಿಸ್ಟ್ ದಿನ ಔಷಧಿಕಾರರ ಸೇವೆ ಅಪಾರ: ಕುಲ್ಕರ್ಣಿ




ಮಲ್ಲಮ್ಮ ನುಡಿ ವಾರ್ತೆ

ಶಹಾಪುರ : ವೈದ್ಯರು ಮತ್ತು ರೋಗಿಗಳ ನಡುವಿನ ಸೇತುವೆ ಔಷಧಿಕಾರರದ್ದಾಗಿದ್ದು, ವೈದ್ಯಲೋಕದಲ್ಲಿ ಸೇವೆ ಅಪಾರವಾಗಿದೆ ಎಂದು ಹಿರಿಯ ಔಷಧಿಕಾರರರಾದ ಗೋಪಲರಾವ ಕುಲ್ಕರ್ಣಿ ಕಕ್ಕೇರಿ ತಿಳಿಸಿದರು.

ನಗರದ ಮನಗೂಳಿ ಫಾರ್ಮಸಿ ಕಾಲೇಜಿನಲ್ಲಿ ವಿಶ್ವ ಫಾರ್ಮಾಸಿಸ್ಟ್ ದಿನವನ್ನು ಆಚರಿಸಿದ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಜಾಗತಿಕ ಮಟ್ಟದಲ್ಲಿ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವಲ್ಲಿ ಹಾಗೂ ಬಲಪಡಿಸುವಲ್ಲಿ ಔಷಧಿಕಾರರು ಪ್ರಮುಖ ಪಾತ್ರವಹಿಸುತ್ತಾರೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಅಯ್ಯಣ್ಣ ಗೌಡ ಪಾಟೀಲ ಅಧ್ಯಕ್ಷರು ಔಷಧಿ ವ್ಯಾಪರಿಗಳ ಸಂಘ, ಹಿರಿಯ ಔಷದಿ ಡಿಸ್ಟ್ರಿಬ್ಯೂಟರ್ ದಿಲೀಪ ಮಾಲ್ಪಾಣಿ, ಕಾಲೇಜಿನ ಮುಖ್ಯಸ್ಥ ಎಸ್.ಎಸ್.ಮನಗೂಳಿ

ಡೋಣಿನದಿಯಲ್ಲಿ ಬೈಕ್ ಸಮೇತ ಕೊಚ್ಚಿ ಹೋದ ಯುವಕ

# ಘಟನಾ ಸ್ಥಳಕ್ಕೆ ಕೆಪಿಸಿಸಿ ಕಾರ್ಯದರ್ಶಿ ಡಾ.ಪ್ರಭುಗೌಡ ಭೇಟಿ

ಮಲ್ಲಮ್ಮ ನುಡಿ ವಾರ್ತೆ



ತಾಳಿಕೋಟಿ:ಪಟ್ಟಣದ ಸಮೀಪ ಹರಿಯುವ ಡೋಣಿ ನದಿಯ ಪ್ರವಾಹದಿಂದಾಗಿ ನೀರಿನಲ್ಲಿ ಬೈಕ್ ಸವಾರ ಸಂತೋಷ ಹಡಪದ ಕೊಚ್ಚಿ ಹೋಗಿರುವ ಹಿನ್ನಲೆಯಲ್ಲಿ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಪ್ರಭುಗೌಡ ಲಿಂಗದಳ್ಳಿ ಅವರು ಗುರುವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿದರು. ತಹಸಿಲ್ದಾರ್ ಡಾ.ವಿನಯಾ ಹೂಗಾರ ಅವರಿಂದ ಘಟನೆಯ ವಿವರವನ್ನು ಪಡೆದು ಕೊಂಡು ನಂತರ ಮಾತನಾಡಿದ ಅವರು ಇದೊಂದು ಅತ್ಯಂತ ದುಃಖದಾಯಕವಾದ ಘಟನೆ ವಡವಡಗಿ ಗ್ರಾಮದ ಬಡ ಯುವಕ ಸಂತೋಷ್ ಹಡಪದ ಎಂಬವನು ನೀರಿನಲ್ಲಿ ಕೊಚ್ಚಿ ಹೋಗಿದ್ದು ಇಲ್ಲಿವರೆಗೆ ಸಿಕ್ಕಿಲ್ಲ ಅಧಿಕಾರಿಗಳು ಶೋಧ ಕಾರ್ಯ ಮುಂದುವರಿಸಿದ್ದಾರೆ. ಆದಷ್ಟು ಬೇಗ ಸಿಗಲಿ ಎಂಬುದು ನನ್ನ ಪ್ರಾರ್ಥನೆಯಾಗಿದೆ. ಇಬ್ಬರು ಬೈಕ್ ಸವಾರರಲ್ಲಿ ಒಬ್ಬರಾದ ಮಹಾಂತೇಶ ಹೊಸಗೌಡರ ಸುರಕ್ಷಿತವಾಗಿ ದಡ ತಲುಪಿದ್ದಾರೆ, ಆದರೂ ಒಂದು ಅಮೂಲ್ಯವಾದ ಜೀವ ಹೋಗಿದೆ, ನಾನು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡುತ್ತೇನೆ ಅವರು ಸಾಧ್ಯವಿದ್ದಷ್ಟು ಈ ಕುಟುಂಬಕ್ಕೆ ಪರಿಹಾರ ನೀಡಲು ಕ್ರಮ ವಹಿಸಬೇಕು ಜೊತೆಗೆ ಹೆಚ್ಚಿನ ಪರಿಹಾರ ಸಿಗುವಂತಾಗಲು ಮಾನ್ಯ ಮುಖ್ಯಮಂತ್ರಿಗಳಿಗೂ ಮನವಿ ಮಾಡಿಕೊಳ್ಳಬೇಕು. ಈ ವಿಷಯದ ಕುರಿತು ನಾನು ಕ್ಷೇತ್ರದ ಶಾಸಕರಾದ ಅಪ್ಪಾಜಿ ನಾಡಗೌಡರೊಂದಿಗೆ ಮಾತನಾಡುತ್ತೇನೆ. ಈ ಸೇತುವೆ ಸುರಕ್ಷತೆಗಾಗಿ ಎರಡೂ ಬದಿಯಲ್ಲಿ ಡ್ರಿಲ್ ಹಾಕಬೇಕು ಇದನ್ನು ನಾನು ಅಧಿಕಾರಿಗಳಿಗೆ ತಿಳಿಸಿದ್ದೇನೆ, ಸಾರ್ವಜನಿಕರೂ ತಮ್ಮ ಸುರಕ್ಷತೆಯ ಕುರಿತು ಹೆಚ್ಚಿನ ಕಾಳಜಿ ವಹಿಸಬೇಕು, ಜೀವ ಅಮೂಲ್ಯವಾದದ್ದು ಅದರ ಎಚ್ಚರ ನಮಗಿರಬೇಕು ಯಾರೂ ಭಂಡ ಧೈರ್ಯ ತೋರಬಾರದು ಎಂದು ತಿಳಿಸಿದರು. ಈ ಸಮಯದಲ್ಲಿ ತಹಶೀಲ್ದಾರ ಡಾ.ವಿನಯಾ ಹೂಗಾರ, ಪಿಎಸ್ಐ ಜ್ಯೋತಿ ಖೋತ್, ಮುಖಂಡ ಮಂಜುನಾಥ್ ಹೊಸಗೌಡರ, ಸುರೇಶಕುಮಾರ ಇಂಗಳಗಿ, ಸಂತೋಷ ಹಡಪದ ಕುಟುಂಬದ ಸದಸ್ಯರು, ರಕ್ಷಣಾ ತಂಡದವರು, ಪೊಲೀಸ್ ಸಿಬ್ಬಂದಿಗಳು ಮತ್ತಿತರರು ಇದ್ದರು.

# ಎನ್.ಎಸ್.ಎಸ್.ಕೆಯಲ್ಲಿ ಮತಗಳ್ಳತನ: ಚುನಾವಣೆಗೆ ತಡೆಯಾಜ್ಞೆ ನೀಡಲು ಹೈಕೋರ್ಟ್‌ಗೆ ಮೊರೆ: ಸೋಮನಾಥ ಪಾಟೀಲ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಸೆ. 25 : ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಮತಗಳ್ಳತನ ನಡೆದ ಬಗ್ಗೆ ಹಲವು ಉದಾಹರಣೆಗಳು ನಡೆದಿದ್ದು ಅದಕ್ಕೆ ತಡೆಯಾಜ್ಞೆ ನೀಡಲು ಹಾಗೂ ಮತದಾನ ಪಟ್ಟಿಯಲ್ಲಿರುವ ದೋಷ ಸರಿಪಡಿಸಿದ ಬಳಿಕ ಚುನಾವಣೆ ನಡೆಸಬೇಕು. ನಾಳಿನ(27/09/2025) ಚುನಾವಣೆ ಮುಂದೂಡಬೇಕೆಂದು ಕಲಬುರಗಿ ಉಚ್ಚ ನ್ಯಾಯಾಲಯಕ್ಕೆ ಮನವಿ ಮಾಡಲಾಗಿದೆ ಎಂದು ಭಾರತೀಯ ಜನತಾ ಪಕ್ಷದ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ತಿಳಿಸಿದರು.

ಗುರುವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಸಾಮಾನ್ಯಕ್ಷೇತ್ರದಿಂದ ಮಲ್ಲಿಕಾರ್ಜುನ್ ಪಾಟೀಲ್ ಮುತ್ತಂಗಿ, ಹಿಂದುಳಿದ ವರ್ಗ ಬಿ ಕೆಟಗರಿಯಿಂದ ಸಂಜು ರೆಡ್ಡಿ ಸಿದ್ದಾರಡ್ಡಿ, ಎಸ್.ಟಿ ಕೆಟೆಗರಿಯಿಂದ ನಮ್ಮ ಪಕ್ಷದ ಬೆಂಬಲಿತ ಅಭ್ಯರ್ಥಿ ಶ್ರೀಧರ ತಂದೆ ಚಂದ್ರಪ್ಪ, ಎಸ್.ಸಿ ಕೆಟೆಗರಿಯಿಂದ ಬಸವಕಲ್ಯಾಣದ ವೀರಣ್ಣ ಹಲಗೆ ಹಾಗೂ ಹಿಂದುಳಿದ ಪ್ರವರ್ಗ ಎ ವತಿಯಿಂದ ಸುರಜ ಸಿಂಗ್ ಭಗುಸಿಂಗ್ ಅವರನ್ನು ಕಣಕ್ಕಿಳಿಸಲಾಗಿದೆ ಎಂದು ವಿವರಿಸಿದರು.

ಹಲವು ವರ್ಷಗಳಿಂದ ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆಯ ಚುನಾವಣೆಗಳು ನಡೆದಿಲ್ಲ. ಈ ಸಹಕಾರಿ ಸಕ್ಕರೆ ಕಾರ್ಖಾನೆ ಬಹಳಷ್ಟು ಕಷ್ಟದಲ್ಲಿ ನಡೆಯುತ್ತಿದೆ ಎಂದು ಹಾಲಿ ಆಡಳಿತ ಮಂಡಳಿ ಹೇಳಿಕೊಳ್ಳುತ್ತಿದೆ. ಆದರೆ ವಾಸ್ತವವಾಗಿ ಮೊದಲಿನಿಂದಲೂ ಒಂದೇ ಆಡಳಿತ ಮಂಡಳಿ ಕಾರ್ಖಾನೆ ನಡೆಸುತ್ತಿದ್ದು ಇದು ಹೇಗೆ ನಷ್ಟ ಉಂಟಾಗಲು ಸಾಧ್ಯ ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ ಎಂದರು.

ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಸುಮಾರು 25000 ಸದಸ್ಯರಿದ್ದು, ಕೇವಲ 4300 ಮತದಾರರ ಪಟ್ಟಿಯನ್ನು ಮಾತ್ರ ಕಾರ್ಖಾನೆ ಆಡಳಿತ ಮಂಡಳಿ ತೋರಿಸುತ್ತಿದೆ. ಸಹಕಾರಿ ಇಲಾಖೆಯ ಬೈಲಾ ಪ್ರಕಾರ ಮತದಾರನಾದವರು ಐದು ವರ್ಷಗಳ ಅವಧಿಯಲ್ಲಿ ಕನಿಷ್ಟ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಿರಬೇಕು ಅಥವಾ ಎರಡು ವರ್ಷಗಳಾದರು ಕಾರ್ಖಾನೆಗೆ ಕಬ್ಬು ಸಾಗಿಸಿರಬೇಕು. ಆದರೆ ನಾವು ನಮ್ಮ ಅಭ್ಯರ್ಥಿಗಳ ಪರವಾಗಿ ಚುನಾವಣಾ ಪ್ರಚಾರಕ್ಕೆ ಹೋದಾಗ ಅಲ್ಲಿ ಅನೇಕ ಅವಾಂತರಗಳು ಕಂಡು ಬಂದವು.



ಉದಾಹರಣೆಗೆ, ಡಾ ಬಸವರಾಜ ಪಾಟೀಲ್ ಅಷ್ಟರ್ ಅವರು ಕಳೆದ ಹಲವು ವರ್ಷಗಳಿಂದ ಕಾರ್ಖಾನೆಗೆ ಕಬ್ಬು ಸಾಗಿಸುತ್ತಿದ್ದರೂ ಮತದಾರರ ಪಟ್ಟಿಯಲ್ಲಿ ಅವರ ಹೆಸರು ಬಿಟ್ಟು ಹೋಗಿದೆ. ಅಣದೂರಿನ ಓರ್ವ ಮಹಿಳೆ ಮಹೇಬೂಬ್ ಬೇಗಂ ಅವರ ಸೇರ್ ಸದಸ್ಯತ್ವ ಸಂಖ್ಯೆ 16130 ಅವರು ತೀರಿ ಹೋಗಿ 9 ವರ್ಷಗಳು ಕಳೆದು ಹೋಗಿವೆ. ಮತದಾರರ ಪಟ್ಟಿಯಲ್ಲಿ ಅವರ ಹೆಸರು ಇರುತ್ತದೆ. ಈಶ್ವರಮ್ಮ ಎಂಬ ಮಹಿಳೆ ತೀರಿ ಹೋಗಿ 5 ವರ್ಷಗಳು ಕಳೆದು ಹೋದರೂ ಮತದಾರ ಪಟ್ಟಿಯಲ್ಲಿ ಆಕೆಯ ಹೆಸರಿದೆ. ನಿಜವಾಗಿ ಯಾರ ಹೆಸರು ಇರಬೇಕೊ ಅವರ ಹೆಸರು ಇಲ್ಲ. ಯಾರದು ಇರಬಾರದೊ ಅವರ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದು ದೊಡ್ಡ ದುರಂತ. ಈ ಎಲ್ಲ ದಾಖಲಾತಿಗಳು ನೋಡಿ ನಾವು ಇದಕ್ಕೆ ತಡೆಯೊದ್ನೆ ನೀಡಬೇಕೆಂದು ಕಲ್ಬುರ್ಗಿ ಹೈಕೋರ್ಟಿಗೆ ಮೊರೆ ಹೋಗಿರುವುದಾಗಿ ಅವರು ಹೇಳಿದರು.

ನಮ್ಮ ಇಬ್ಬರು ಮೂವರು ಅಭ್ಯರ್ಥಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಬೇಕೆಂದು ಮನವರಿಕೆ ಮಾಡಿಕೊಡಲು ನಮ್ಮ ಪಕ್ಷದ ಹಿರಿಯ ಮುಖಂಡರಾದ ಗುರುನಾಥ ಚಾಂತಿಕರ್ ಅವರಿಗೆ ಮಾತುಕತೆಗೆ ಕಳಿಸಲಾಗಿತ್ತು. ಆದರೆ ಕಾರ್ಖಾನೆ ಆಡಳಿತ ಮಂಡಳಿಯವರು ಇದಕ್ಕೆ ಸೊಪ್ಪು ಹಾಕಲಿಲ್ಲ. ಹಾಗಾಗಿ ಅನಿವಾರ್ಯವಾಗಿ ಚುನಾವಣೆಗೆ ನಿಲ್ಲುವುದಾಗಿ ಬಂತು. ಕಾರ್ಖಾನೆ ಆಡಳಿತ ಮಂಡಳಿಯವರು ಚುನಾವಣೆಗಾಗಿ ತಮ್ಮ ಸಿಬ್ಬಂದಿಗಳನ್ನು ಬಳಸಿಕೊಳ್ಳುತ್ತಿರುವುದು ನೇರವಾಗಿ ಗಮನಕ್ಕೆ ಬಂದಿದೆ. ಸಿಬ್ಬಂದಿಗಳು ತಮ್ಮ ವಾಟ್ಸಪ್ ಗಳಲ್ಲಿ ಅವರ ಪೆನಲ್ ನ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಲು ಬಾಲೆಟ್ ಪೇಪರ್ಗಳನ್ನು ಬಳಸಿರುವುದು ಕಂಡು ಬಂದಿದೆ. ಹಾಗೆ ಕಾರ್ಖಾನೆಯ ಸದಸ್ಯತ್ವ ಹೊಂದಿರುವ ಯಾರೊಬ್ಬ ರೈತರಿಗೆ ಇಲ್ಲಿ ವರೆಗೆ ಗುರುತಿನ ಚೀಟಿ ಕೊಡದೆ ಇರುವುದು ವಿಪರ್ಯಾಸ. ಈ ಎಲ್ಲ ಬೆಳವಣಿಗೆಯಿಂದ ಚುನಾವಣೆಗಳು ಸುಸೂತ್ರವಾಗಿ ನಡೆಯಬೇಕೆಂಬ ಕಾರಣಕ್ಕಾಗಿ ಬೀದರ್ ಸಹಾಯಕ ಆಯುಕ್ತರಿಗೆ ಈಗಾಗಲೇ ಈ ಸಂಬಂಧವಾಗಿ ದೂರು ಸಲ್ಲಿಸಲಾಗಿದ್ದು ದೋಷ ಎಸೆಗಿದ ಕಾರ್ಖಾನೆ ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಕೈಗೊಂಡು ಅವರನ್ನು ಚುನಾವಣೆ ಕಾರ್ಯಗಳಿಂದ ದೂರವಿಡಬೇಕೆಂದು ನೋಟಿಸ್ ನೀಡಿರುತ್ತಾರೆ. ಮಹಾತ್ಮ ಗಾಂಧಿ ಸಕ್ಕರೆ ಕಾರ್ಖಾನೆಯಲ್ಲಿಯೂ ಸಹ ಇದೇ ರೀತಿ ನಾವು ಪಕ್ಷದ ಪೆನಲ್ ಮಾಡಿ ಚುನಾವಣೆಗೆ ಸ್ಪರ್ಧಿಸುವವರಿದ್ದೇವೆ ಎಂದು ಸೋಮನಾಥ ಪಾಟೀಲ್ ಇದೇ ವೇಳೆ ತಿಳಿಸಿದರು.

ಪಕ್ಷದ ಮುಖಂಡರಾದ, ಈಶ್ವರಸಿಂಗ್ ಠಾಕೂರ್, ರಾಜಶೇಖರ್ ನಾಗಮೂರ್ತಿ, ಮಾಜಿ ಬೂಡಾ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಾದ ಮಲ್ಲಿಕಾರ್ಜುನ್ ಪಾಟಿಲ್ ಉತ್ತಂಗಿ, ಸಂಜು ರೆಡ್ಡಿ ಸಿದ್ದಾ ರೆಡ್ಡಿ, ಶ್ರೀಧರ ತಂದೆ ಚಂದ್ರಪ್ಪ, ವೀರಣ್ಣ ಹಲಗೆ, ಸುರಜಸಿಂಗ್ ರಾಜಪುತ, ಪಕ್ಷದ ಮಾಧ್ಯಮ ಪ್ರಮುಖ ಶ್ರೀನಿವಾಸ್ ಚೌಧರಿ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ವಚನಗಳಲ್ಲಿ ಆದರ್ಶ ದಾಂಪತ್ಯ ಮಾರ್ಗದರ್ಶನ




ಬೀದರ. ಸೆ. 25 : ವಚನಗಳಲ್ಲಿ ಆದರ್ಶ ದಾಂಪತ್ಯದ ಮಾರ್ಗದರ್ಶನ ಇದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಶಂಭುಲಿಂಗ ಕಾಮಣ್ಣ ಹೇಳಿದರು.

ನಗರದ ಶರಣ ಉದ್ಯಾನದಲ್ಲಿ ಮರಣವೇ ಮಹಾ ನವಮಿ ಹಾಗೂ ಕಲ್ಯಾಣ ಕ್ರಾಂತಿ ವಿಜಯೋತ್ಸವದ ಎರಡನೇ ದಿನವಾದ ಬುಧವಾರ ನಡೆದ ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದ ಶಿವಂಗೆ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾಜದ ಮೂಲ ಘಟಕ ಕುಟುಂಬ. ಕುಟುಂಬದ ಕೇಂದ್ರ ಬಿಂದು ದಂಪತಿ. ಸತಿ-ಪತಿಗಳು ಒಂದಾಗಿದ್ದರೆ ಕುಟುಂಬದಲ್ಲಿ ಸಂತೋಷ- ಆನಂದ ಇರುತ್ತದೆ. ಸತಿ-ಪತಿಗಳಲ್ಲಿ ಹೊಂದಾಣಿಕೆ ಇಲ್ಲದಿದ್ದರೆ ದುಃಖದ ಆಗರ ಆಗುತ್ತದೆ ಎಂದು ತಿಳಿಸಿದರು.

ದಾಂಪತ್ಯದಲ್ಲಿ ಸರಸ ದಾಂಪತ್ಯ, ವಿರಸ ದಾಂಪತ್ಯ, ಸಮರಸ ದಾಂಪತ್ಯ, ಅನುಕೂಲ ದಾಂಪತ್ಯ, ಅನುರಾಗ ದಾಂಪತ್ಯ, ವಿಚಿತ್ರ ದಾಂಪತ್ಯಗಳಿವೆ ಎಂದು ಹೇಳಿದರು.

ನಿಜವಾದ ದಾಂಪತ್ಯ ದೇಹ ಎರಡಾದರೂ ಭಾವ ಒಂದಾಗುವಂತೆ ಇರಬೇಕು. ಎಣ್ಣೆ-ಬತ್ತಿ ಸೇರಿದಾಗ ಮಾತ್ರ ಜ್ಯೋತಿ ಬೆಳಗಲು ಸಾಧ್ಯ. ಹಾಗೆಯೇ ತಾಳ್ಮೆ, ಹೊಂದಾಣಿಕೆಯಿಂದ ಇಬ್ಬರ ಮನಸ್ಸು ಒಂದಾಗಿದ್ದರೆ ದೇವರ ಮುಂದೆ ನಂದಾದೀಪ ಬೆಳಗಿದಂತೆ ಎಂದು ತಿಳಿಸಿದರು.

ಬಸವಣ್ಣ-ನೀಲಮ್ಮ, ದಾಸ-ದುಗ್ಗಳೆ, ಆಯ್ದಕ್ಕಿ ಮಾರಯ್ಯ-ಲಕ್ಕಮ್ಮರ ಆದರ್ಶಗಳನ್ನು ಅನುಸರಿಸಿದರೆ ಬದುಕು ಬಂಗಾರವಾಗುತ್ತದೆ ಎಂದು ಹೇಳಿದರು.

ಬಸವಾದಿ ಶರಣರ ಕ್ರಾಂತಿಯಿಂದಾಗಿ ಇಂದು ಮಹಿಳೆ ಅಕ್ಷರ ಕಲಿತು ಎಲ್ಲ ಕ್ಷೇತ್ರಗಳಲ್ಲಿ ಪುರುಷನ ಸರಿಸಮನಾಗಿ ದುಡಿಯಲು ಸಾಧ್ಯವಾಗಿದೆ ಎಂದು ಉದ್ಘಾಟನೆ ನೆರವೇರಿಸಿದ ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷೆ ಮೀನಾಕ್ಷಿ ಸಂಗ್ರಾಮ ತಿಳಿಸಿದರು.

ವಚನಗಳ ಮಾರ್ಗದಲ್ಲಿ ನಡೆದರೆ ಸರ್ವ ಸಾಧನೆ ಸಾಧ್ಯ. ಸತಿ-ಪತಿಗಳು ಪರಸ್ಪರ ಪ್ರಗತಿಗೆ ಸಹಕರಿಸಿದಾಗ ಸ್ವರ್ಗಕ್ಕೆ ಕಿಚ್ಚು ಹಚ್ಚುವಂಥ ಜೀವನ ನಮ್ಮದಾಗುತ್ತದೆ ಎಂದು ಹೇಳಿದರು.

ಸಂಸಾರವೆಂದರೆ ಮಾಯೆ, ದುಃಖವೆಂದ ಪ್ರಪಂಚಕ್ಕೆ ಸಂಸಾರವೆಂದರೆ ಸದ್ಗತಿ ಎಂದು ತೋರಿದವರು ಬಸವಣ್ಣನವರು. ಸತಿ-ಪತಿ ಜತೆ ಜತೆಯಾಗಿ ಸದ್ಗತಿ ಸಾಧಿಸುವ ಸತ್ಯದ ದಾರಿ ತೋರಿಸಿದರು ಎಂದು ಸಾನಿಧ್ಯ ವಹಿಸಿದ್ದ ಲಿಂಗಾಯತ ಮಹಾಮಠದ ಪ್ರಭುದೇವ ಸ್ವಾಮೀಜಿ ನುಡಿದರು.

ಕಾಲುಗಳೆರಡಾದರೂ ಪರಸ್ಪರ ಅನೂನ್ಯತೆಯಿಂದ ನಡೆದರೆ ಮಾತ್ರ ಗುರಿ ತಲುಪುವಂತೆ, ದಂಪತಿ ಒಂದಾಗಿ ಸಾಗಬೇಕು ಎಂದು ತಿಳಿಸಿದರು.

ಹುಳಿವಿಡಿದು ತುಪ್ಪವ ಕಾಣುವಂತೆ, ಅಕ್ಷರವಿಡಿದು ವಿದ್ಯೆವನರಿವಂತೆ, ಅನ್ನವ ಉಂಡು ಚೈತನ್ಯವ ಪಡೆವಂತೆ, ಸತಿವಿಡಿದು ನಿರ್ವಾಣಗತಿ ಕಾಣಬೇಕೆನ್ನುತ್ತಾರೆ ಶರಣರು. ಇಂದಿನ ದಿನಮಾನಗಳಲ್ಲಿ ಈ ಆದರ್ಶಗಳು ಮರೆಯಾಗಿ ವಿಚ್ಛೇದನಗಳು ಹೆಚ್ಚುತ್ತಿವೆ. ಕಾರಣ, ಶರಣರ ದಾಂಪತ್ಯದ ಆದರ್ಶ ಸಮಾಜದಲ್ಲಿ ಬಿತ್ತುವ ಅವಶ್ಯಕತೆ ಇದೆ ಎಂದು ಹೇಳಿದರು.

ಎಲ್ಲಕ್ಕೂ ದೊಡ್ಡದು ಆತ್ಮ ಸಂಧಾನ. ಸಂಸಾರದಲ್ಲಿದ್ದರೂ ಆಧ್ಯಾತ್ಮದ ಆ ಎತ್ತರಕ್ಕೆ ಏರಲು ಸಾಧ್ಯವೆಂದು, ಸಾಧಿಸಿ ತೋರಿದವರು ಶರಣರು ಎಂದು ತಿಳಿಸಿದರು.

ಲಿಂಗಾಯತ ಮಹಾಮಠದ ಪ್ರಮುಖರಾದ ಅಶೋಕ ಎಲಿ ಅಧ್ಯಕ್ಷತೆ ವಹಿಸಿದ್ದರು. ನ್ಯಾಯವಾದಿ ಚೇತನಾ ಪಾಟೀಲ, ಸಿ.ಎಸ್. ಗಣಾಚಾರಿ, ಚಿಂಚೋಳಿಯ ಬಸವ ಸೇವಾ ಪ್ರತಿಷ್ಠಾನದ ಉದಯ ಪಾಟೀಲ ಉಪಸ್ಥಿತರಿದ್ದರು.

ಲಿಂಗಾಯತ ಸೇವಾ ದಳದ ಭಾಗ್ಯಶ್ರೀ ಶಿವಪ್ರಸಾದ ವಚನ ಪಠಣ, ಶ್ರೀದೇವಿ ಶರಣಬಸವ ಹಾಗೂ ಶ್ಯಾಮಲಾ ಎಲಿ ವಚನ ಗಾಯನ ಮಾಡಿದರು.

ಶಿಲ್ಪಾ ಮಹೇಶ ಮಜಗೆ ನಿರೂಪಿಸಿದರು. ಡಾ. ಪ್ರಿಯಾ ಎಲಿ ಸ್ವಾಗತಿಸಿದರು. ಶಿವಾನಿ ರೇವಣಸಿದ್ಧ ಗಣಾಚಾರಿ ಭಕ್ತಿ ದಾಸೋಹಗೈದರು.

# ಸೇಡಂ ಭಾಜಪ ಕಾರ್ಯಾಲಯದಲ್ಲಿ ಉಪಾಧ್ಯಾಯರ ಜಯಂತಿ



ಸೇಡಂ, ಸೆ, 25, ತಾಲೂಕಿನ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ಶ್ರೀ ಪಂಡಿತ್ ದೀನದಯಾಳ ಉಪಾಧ್ಯಾಯರ ಜಯಂತಿ ಆಚರಣೆ. ಮಾಜಿ ಶಾಸಕರಾದ ರಾಜಕುಮಾರ ಪಾಟೀಲ ತೆಲ್ಕೂರ ಅವರು ಉಪಾಧ್ಯಾಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಪಕ್ಷದ ಹಿರಿಯ ಮುಖಂಡರು, ವಿವಿಧ ಮೋರ್ಚಾಗಳ ಅಧ್ಯಕ್ಷರು, ಯುವಕಾರ್ಯಕರ್ತರು ಇನ್ನಿತರರು ಉಪಸ್ಥಿತರಿದ್ದರು.

# ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ ಸೆ.28ರಂದು



ಕಲಬುರಗಿ:ಸೆ.25:ಶಿಕ್ಷಕರ ದಿನಾಚರಣೆಯ ಅಂಗವಾಗಿ ಡಾ.ರಾಜಕುಮಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಲಾ ಸಂಘ (ರಿ) ರಾಜಾಪೂರ ಕಲಬುರಗಿ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ದಿನಾಂಕ 28-09-2025 ರವಿವಾರ ದಂದು ಕಲಬುರಗಿಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪಕ್ಕದಲ್ಲಿರುವ ರಂಗಾಯಣ ಸಭಾ ಭವನದಲ್ಲಿ ಶಿಕ್ಷಕರ ದಿನಾಚರಣೆ, ನಾಡಿನ ವಿವಿಧ ಜಿಲ್ಲೆಗಳ ಸಾಧಕ ಶಿಕ್ಷಕರಿಗೆ ರಾಜ್ಯ ಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿ, ವಿವಿಧ ಕ್ಷೇತ್ರದ ಸಾಧಕರಿಗೆ ಸೇವಾರತ್ನ ಪ್ರಶಸ್ತಿ ಪ್ರದಾನ ವಿಶೇಷ ಸನ್ಮಾನ ಹಾಗೂ ಹಾಸ್ಯ, ಸಂಗೀತ, ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಡಾ. ದಯಾನಂದ ಎಸ್ ಬಸವಪಟ್ಟಣ ಕಲಬುರ್ಗಿ, ಡಾ. ವಿಜಯಕುಮಾರ ಶರಣಪ್ಪ ಕಲಬುರ್ಗಿ, ಡಾ. ನಾಗರತ್ನ ಎಸ್ ಕಲಬುರ್ಗಿ, ಮಹಾನಂದ. ವಿ.ಗಡ್ಡದ್ ಕಲಬುರ್ಗಿ, ಶ್ರೀದೇವಿ ಎಸ್ ಪಾಟೀಲ ಕಲಬುರ್ಗಿ, ಸಂಗೀತ.ಎ.ಉಪ್ಪಿನ ಕಲಬುರ್ಗಿ, ಶಹಾನಾ ಬೇಗಂ ರಾಯಚೂರು, ಕುಮಾರಿ ವಿದ್ಯಾ ಎಲ್ ಅಯ್ಯಾಳಕರ ಕಲಬುರ್ಗಿ, ಸುರೇಶ್ ಎಸ್ ಮಾಳಗೆ ಯಾದಗಿರಿ, ಕುಮಾರಿ ವಿದ್ಯಾಶ್ರೀ ಹೆಚ್ಚು ರಾಠೋಡ ವಿಜಯಪೂರ, ಮಾಣಿಕಪ್ಪ ಹೆಚ್ ಚಿಂಚೋಳಿ ಬೀದರ, ಪರಶುರಾಮ್ ಡಿ ಬಿರಾದಾರ ಕಲಬುರ್ಗಿ, ಭೀರು ಎಸ್ ಪೂಜಾರಿ ವಿಜಯಪೂರ ಇವರಿಗೆ ರಾಜ್ಯಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿ ನೀಡಲಾಗುವುದು.

ಕಿರಣಕುಮಾರ ಕಲಬುರ್ಗಿ, ಗುಂಡಪ್ಪ ಎನ್ ಚಿಂಚೋಳಿ, ಲಾಲಪ್ಪ ಎಸ್ ಜ್ಯೋತಿ ಚಿಂಚೋಳಿ, ಶಿವಪ್ರಕಾಶ್ ಎಂ ಕಟ್ಟಿಮನಿ ಚಿಂಚೋಳಿ, ಸುರೇಶ ಎಂ ತೇಗಲತಿಪ್ಪಿ ಕಾಳಗಿ, ಸಂತೋಷ ಹೊಸಳ್ಳಿ ಕಾಳಗಿ ಇವರಿಗೆ

ಸಮಾಜ ಸೇವ ರತ್ನ ಪ್ರಶಸ್ತಿ ನೀಡಲಾಗುವುದು. ಕುಮಾರಿ. ಸಾವಿತ್ರಾ ಹುಲೆಪ್ಪ ಗಾರಂಪಳ್ಳಿ ಚಿಂಚೋಳಿ ಇವರಿಗೆ ಆದರ್ಶ ವಿದ್ಯಾರ್ಥಿ ಪ್ರಶಸ್ತಿ ವಿತರಿಸಲಾಗುವುದು. ಎಂದು ಸಂಘದ ಅಧ್ಯಕ್ಷರಾದ ಪ್ರೊ. ರಮೇಶ.ಬಿ.ಯಾಳಗಿ, ಕಾರ್ಯದರ್ಶಿಗಳಾದ ಯಲ್ಲಾಲಿಂಗ ದಂಡಿನ್ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೈಗಾರಿಕಾ ಇಲಾಖೆಯ ಇನ್ಕ್ಯುಬೇಷನ್ ಕೇಂದ್ರ ಶರಣಬಸವ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಪ್ರಸ್ತಾವನೆ



ಕಲಬುರಗಿ;ಸೆ.25: ಕರ್ನಾಟಕ ರಾಜ್ಯ ಸರ್ಕಾರವು ಶರಣಬಸವ ವಿಶ್ವವಿದ್ಯಾಲಯದಲ್ಲಿ ಕೈಗಾರಿಕಾ ಇನ್ಕ್ಯುಬೇಷನ್ ಕೇಂದ್ರವನ್ನು ಸ್ಥಾಪಿಸಲು ಪ್ರಸ್ತಾಪಿಸಿದೆ. ಇದು ವ್ಯವಹಾರ ಅಧ್ಯಯನ ನಿಕಾಯದ ವಿದ್ಯಾರ್ಥಿಗಳು ಮತ್ತು ಇತರ ವಿಭಾಗದ ವಿದ್ಯಾರ್ಥಿಗಳು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯದಲ್ಲಿ ತಮ್ಮದೇ ಆದ ಕೈಗಾರಿಕೆಗಳನ್ನು ಪ್ರಾರಂಭಿಸುವ ಸಾಧ್ಯತೆಗಳನ್ನು ಅನ್ವೇಷಿಸಲು ಅವಕಾಶಗಳನ್ನು ತೆರೆಯುತ್ತದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಶ್ರೀ ಅಬ್ದುಲ್ ಅಜೀಂ ತಿಳಿಸಿದರು.

ಗುರುವಾರ ಕಲಬುರಗಿ ನಗರದ ಶರಣಬಸವ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ದೊಡ್ಡಪ್ಪ ಅಪ್ಪಾ ಸಭಾಂಗಣದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ(ಡಿಐಸಿ) ಸಹಯೋಗದೊಂದಿಗೆ ಶರಣಬಸವ ವಿಶ್ವವಿದ್ಯಾಲಯದ ವ್ಯವಹಾರ ಅಧ್ಯಯನ ನಿಕಾಯವು ಆಯೋಜಿಸಿದ್ದ ಇನ್‌ಕ್ಯುಬೇಶನ್ ಜಾಗೃತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಅಬ್ದುಲ್ ಅಜೀಂ, ಕಲಬುರಗಿ ಜಿಲ್ಲೆ ಶಿಕ್ಷಣ ವಲಯ ಮತ್ತು ಆರೋಗ್ಯ ವಲಯದಲ್ಲಿ ಹಿಂದುಳಿದಿದ್ದನ್ನು ಅಳಿಸಿಹಾಕುವಲ್ಲಿ ಯಶಸ್ವಿಯಾಗಿದ್ದರೂ, ಗುಣಮಟ್ಟದ ಶಿಕ್ಷಣ ಸಂಸ್ಥೆಗಳು ಮತ್ತು ವಿಶೇಷ ಆರೋಗ್ಯ ಸೌಲಭ್ಯಗಳ ಸರಪಳಿಯೊಂದಿಗೆ ಶೈಕ್ಷಣಿಕ ಮತ್ತು ಆರೋಗ್ಯ ಕೇಂದ್ರವಾಗಿ ಮಾರ್ಪಟ್ಟಿದ್ದರೂ, ಜಿಲ್ಲೆಯು ಕೈಗಾರಿಕಾ ವಲಯದಲ್ಲಿ ಇನ್ನೂ ಹಿಂದುಳಿದಿದೆ ಎಂದು ಇನ್ನೂ ಕರೆಯಲ್ಪಡುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕಲಬುರಗಿ ಜಿಲ್ಲೆ ಕೈಗಾರಿಕೆಯಲ್ಲಿ ಹಿಂದುಳಿದಿದ್ದನ್ನು ಅಳಿಸಲು ಇಂದು ಸಂಘಟಿತ ಪ್ರಯತ್ನದ ತುರ್ತು ಅಗತ್ಯವಿದೆ. ಇಂಜಿನಿಯರಿಂಗ್ ಮತ್ತು ವ್ಯವಹಾರ ಅಧ್ಯಯನ ಕೋರ್ಸ್‌ಗಳನ್ನು ಅನುಸರಿಸುವ ವಿದ್ಯಾರ್ಥಿಗಳು ಸೂಕ್ಷ್ಮ, ಸಣ್ಣ, ಮತ್ತು ಮಧ್ಯಮ ಉದ್ಯಮಿಗಳನ್ನು (ಎಂಎಸ್‌ಎಂಇ) ಉತ್ತೇಜಿಸಲು ಸರ್ಕಾರ ನೀಡುವ ರಿಯಾಯಿತಿಗಳ ಸಂಪೂರ್ಣ ಪ್ರಯೋಜನವನ್ನು ಪಡೆಯುವ ಮೂಲಕ ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆಯ ಹಣೆಪಟ್ಟಿಯನ್ನು ಅಳಿಸುವ ಗುರುತರ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ಹೇಳಿದರು.

ಭಾರತದ ಆರ್ಥಿಕತೆಯ ಬೆನ್ನೆಲುಬಾಗಿ ಸೂಕ್ಷ್ಮ ಉದ್ಯಮಗಳು ಕಾರ್ಯನಿರ್ವಹಿಸುತ್ತಿದ್ದು, ಅವು ಒಟ್ಟು ದೇಶೀಯ ಉತ್ಪನ್ನಕ್ಕೆ (ಜಿಡಿಪಿ) ಸುಮಾರು ಶೇ. 25ರಷ್ಟು ಕೊಡುಗೆ ನೀಡುತ್ತಿವೆ ಮತ್ತು 10 ಕೋಟಿಗೂ ಹೆಚ್ಚು ಜನರಿಗೆ ಜೀವನೋಪಾಯವನ್ನು ಒದಗಿಸುತ್ತಿವೆ. ಕೇಂದ್ರ ಸರ್ಕಾರವು ಇತ್ತೀಚೆಗೆ ವಿಶ್ವ ಬ್ಯಾಂಕ್ ನೆರವಿನ "ಎಂಎಸ್‌ಎಂಇ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಮತ್ತು ವೇಗಗೊಳಿಸುವುದು" ಎಂಬ ಯೋಜನೆಯನ್ನು ಪ್ರಾರಂಭಿಸಿದೆ. ಇದು ಎಂಎಸ್‌ಎಂಇಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು, ಮಾರುಕಟ್ಟೆ ಅವಕಾಶಗಳು ಮತ್ತು ಸಾಲದ ಪ್ರವೇಶವನ್ನು ಸುಧಾರಿಸುವುದು, ನಾವೀನ್ಯತೆಯನ್ನು ಬೆಳೆಸುವುದು, ಹೊಸ ತಂತ್ರಜ್ಞಾನಗಳನ್ನು ಉತ್ತೇಜಿಸುವುದು ಹಾಗೂ ಅವುಗಳನ್ನು ಅಳವಡಿಸಿಕೊಳ್ಳುವುದು ಪ್ರಮುಖ ಉದ್ದೇಶವಾಗಿದೆ.

ವಿಶ್ವವಿದ್ಯಾಲಯದ ಕುಲಸಚಿವ ಡಾ. ಎಸ್. ಜಿ. ಡೊಳ್ಳೇಗೌಡರ್ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ಕೈಗಾರಿಕಾ ವಲಯದ ಬಲವಾದ ಬೆಳವಣಿಗೆಯು ಹಲವಾರು ಅಡೆತಡೆಗಳನ್ನು ನಿವಾರಿಸಿ, ದೇಶವು ಸಾಧಿಸಿದ ಅದ್ಭುತ ಬೆಳವಣಿಗೆಗೆ ಮತ್ತಷ್ಟು ಪ್ರಚೋದನೆಯನ್ನು ನೀಡುತ್ತದೆ ಹಾಗೂ ಇದು ವಿಶ್ವದ 4ನೇ ಅತಿ-ದೊಡ್ಡ ಆರ್ಥಿಕತೆಯಾಗಿದೆ. ದೇಶವು ಸಾಧಿಸಿದ 6.8 ಜಿಡಿಪಿ ಬೆಳವಣಿಗೆ ಊಹಿಸಲಾಗದ ಸಂಗತಿಯಾಗಿದೆ ಎಂದರು.

ವಿಶ್ವವಿದ್ಯಾಲಯದಲ್ಲಿ ಇನ್‌ಕ್ಯುಬೇಶನ್ ಕೇಂದ್ರವನ್ನು ಸ್ಥಾಪಿಸುವ ಕೈಗಾರಿಕಾ ಇಲಾಖೆಯ ಪ್ರಸ್ತಾವನೆಯನ್ನು ಸ್ವಾಗತಿಸಿದ ಡಾ. ಡೊಳ್ಳೇಗೌಡರ್, ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿನ ಅವಕಾಶಗಳನ್ನು ಅನ್ವೇಷಿಸಲು ಮತ್ತು ಭವಿಷ್ಯದ ಉದ್ಯಮಿಗಳಾಗಲು ಎಲ್ಲಾ ಇಲಾಖೆಗಳಲ್ಲಿ ಇನ್‌ಕ್ಯುಬೇಶನ್ ಕೇಂದ್ರಗಳನ್ನು ಸ್ಥಾಪಿಸುವ ಅವಶ್ಯಕತೆಯಿದೆ ಎಂದು ಹೇಳಿದರು.

ತಾಂತ್ರಿಕ ಅಧಿವೇಶನಗಳ ಉದ್ಘಾಟನೆಯ ನಂತರ ಲೀಡ್ ಬ್ಯಾಂಕ್‌ನ ಜಿಲ್ಲಾ ಮುಖ್ಯ ವ್ಯವಸ್ಥಾಪಕ ಶ್ರೀ ರವಿ ಗೌಡ, ಹಿರಿಯ ತರಬೇತುದಾರ ಸಿಇಡಿಒಕೆ ಸೈಯದ್ ಅಶ್ಫಾಕ್ ಅಹ್ಮದ್, ಕೈಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕಿ ಕುಮಾರಿ ರೂಪಾಲಿ ಶೇಖ್ರ್ಬಾನಾ, ಎಸ್‌ಬಿಐ ಮುಖ್ಯ ವ್ಯವಸ್ಥಾಪಕ ಶ್ರೀ ಗೌರವ್ ಗುಪ್ತಾ ಮತ್ತು ಇತರರು ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು. ಕಾರ್ಯಾಗಾರದಲ್ಲಿ ವಿವಿಯ ಕುಲಸಚಿವ (ಮೌಲ್ಯಮಾಪನ) ಡಾ ಎಸ್ ಎಚ್ ಹೊನ್ನಳ್ಳಿ, ಡೀನ್ ಡಾ ಲಕ್ಷ್ಮಿ ಪಾಟೀಲ್ ಮಾಕಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಆರ್ಥಿಕ ಬೆಳವಣಿಗೆಗೆ ಮೇಕ್ ಇನ್ ಇಂಡಿಯಾ ಪೂರಕ



ಕಲಬುರಗಿ : ಸೆ.25: ಭಾರತದಲ್ಲಿ ವಿನ್ಯಾಸ, ತಯಾರಿಕೆ ಮತ್ತು ಜೋಡಣೆಯನ್ನು ಉತ್ತೇಜಿಸಲು, ವ್ಯಾಪಾರ-ವ್ಯವಹಾರ ವೃದ್ಧಿಗೆ ಭಾರತ ಸರ್ಕಾರವು ಪ್ರಾರಂಭಿಸಿದ ಮೇಕ್ ಇನ್ ಇಂಡಿಯಾ ಯೋಜನೆ ಪೂರಕವಾಗಿದೆ ಎಂದು ಜಿಲ್ಲಾ ಸಣ್ಣ ಕೈಗಾರಿಕೆಗಳ ಮಾಲೀಕರ ಸಂಘದ ಅಧ್ಯಕ್ಷ ಭೀಮಾಶಂಕರ ಪಾಟೀಲ್ ಹೇಳಿದರು.

ನಗರದ ಹೊಸ ಜೇವರ್ಗಿ ರಸ್ತೆಯ ಗೇಟ್ಸ್ ಡಿಗ್ರಿ ಕಾಲೇಜಿನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ "ಮೇಕ್ ಇನ್ ಇಂಡಿಯಾದ ದಶಮಾನೋತ್ಸವ" ಕಾರ್ಯಕ್ರಮವನ್ನು

ಉದ್ಘಾಟಿಸಿ ಅವರು ಮಾತನಾಡಿದರು. ಅರ್ಥಶಾಸ್ತ್ರ ಉಪನ್ಯಾಸಕ ಎಚ್.ಬಿ.ಪಾಟೀಲ್ ಮಾತನಾಡಿ, ಉತ್ಪಾದನೆಯಲ್ಲಿ ಹೂಡಿಕೆಯನ್ನು ಹೆಚ್ಚಿಸುವುದು, ನಾವೀನ್ಯತೆಯನ್ನು ಪ್ರೋತ್ಸಾಹಿಸುವುದು, ವ್ಯಾಪಾರ ಮಾಡಲು ಸುಲಭವಾದ ವಾತಾವರಣವನ್ನು ಸೃಷ್ಟಿಸುವುದು, ಉದ್ಯೋಗ ಸೃಷ್ಟಿ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಕೌಶಲ್ಯವೃದ್ಧಿಯನ್ನು ಉತ್ತೇಜಿಸುವುದು, ಜಾಗತಿಕ ಸ್ಪರ್ಧಾತ್ಮಕತೆಯನ್ನು ಉತ್ತೇಜಿಸುವುದು ಈ ಯೋಜನೆಯ ಪ್ರಮುಖ ಉದ್ದೇಶಗಳಾಗಿವೆ. ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಶಿವಲಿಂಗಪ್ಪ ತಳವಾರ, ಶಶಿಕುಮಾರ್ ಸೇರಿದಂತೆ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸಮಗ್ರ ಶಾಲಾ ಅಭಿವೃದ್ಧಿಯ ನಾನಾ ಕಾಮಗಾರಿ ವೀಕ್ಷಿಸಿ, ಕಾಲಮಿತಿಯಲ್ಲಿ ಕಾಮಗಾರಿ ನಿರ್ವಹಿಸಿ : ಸಿಇಒ ಶ್ರೀ ಲವೀಶ್ ಒರಡಿಯಾ



**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ : ಸೆಪ್ಟೆಂಬರ್ 25– ಯಾದಗಿರಿ: ಶಾಲಾ ಅಭಿವೃದ್ಧಿಯ ಕಾಮಗಾರಿಗಳ ನಿರ್ವಹಣೆಯಲ್ಲಿ ವಿಳಂಬ ಮಾಡದೆ, ನಿಗದಿತ ಅವಧಿಯಲ್ಲೆ ಪೂರ್ಣಗೊಳಿಸಬೇಕು ಎಂದು ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಯಾದಗಿರಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ್ ಒರಡಿಯಾ ಅವರು ಸೂಚಿಸಿದರು.

ನಮ್ಮ ಶಾಲೆ ನಮ್ಮ ಅಭಿವೃದ್ಧಿ ವಿಶೇಷ ಅಭಿಯಾನದ ಮೂಲಕ ಗ್ರಾಮೀಣ ಪ್ರದೇಶದ ಸರಕಾರಿ ಶಾಲೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಬಾಡಿಯಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಂಗವಾರ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮನರೇಗಾ ಯೋಜನೆಯಡಿ ಅನುಷ್ಠಾನ ಮಾಡಿದ ಶಾಲಾ ಕಾಂಪೌಂಡ್ ವಾಲ್ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ, ಕಾಮಗಾರಿ ಪ್ರಗತಿ ವೀಕ್ಷಿಸಿ ಅವರು ಮಾತನಾಡಿದರು.

ಮಕ್ಕಳಲ್ಲಿ ಕಲಿಕಾ ಗುಣಮಟ್ಟ ಸುಧಾರಣೆ ಹಾಗೂ ಕಲಿಕಾ ವಾತಾವರಣ ನಿರ್ಮಿಸಲು ಸರಕಾರಿ ಶಾಲೆಗಳಿಗೆ ಅಗತ್ಯವಾದ ಮೂಲ ಸೌಕರ್ಯ ಒದಗಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ ಶಾಲೆಯ ಸ್ಥಳದ ಲಭ್ಯಗೆ ಅನುಸಾರ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ನಾನಾ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಿ ಕೊಡಲಾಗುತ್ತಿದೆ ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಸರಕಾರಿ ಶಾಲೆಗಳಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಭೇಟಿ ನೀಡಿ, ಶಾಲೆಯ ಮೂಲ ಸೌಲಭ್ಯಗಳ ಲಭ್ಯತೆ ಕುರಿತು ಪರಿಶೀಲಿಸಿ, ಶಾಲೆಗೆ ಅಗತ್ಯವಾದ ಕಾಮಗಾರಿಗಳನ್ನು ಆಧ್ಯತೆ ಮೇಲೆ ನಿರ್ವಹಿಸಿಕೊಡಿ ಎಂದು ಗ್ರಾಮ ಪಂಚಾಯಿತಿ ಪಿಡಿಒ ಅವರಿಗೆ ಸೂಚಿಸಿದರು.

ಬಳಿಕ, ಶಾಲೆಗೆ ಭೇಟಿ ನೀಡಿದ, ಅವರು ಮಕ್ಕಳ ಕಲಿಕೆ, ಅಹಾರ ಪದಾರ್ಥ ದಾಸ್ತಾನು, ಶೌಚಾಲಯ ನಿರ್ವಹಣೆ ಹಾಗೂ ಸ್ವಚ್ಛತೆ ಕುರಿತು ಪರಿಶೀಲಿಸಿ, ಮಾಹಿತಿ ಪಡೆದರು. ನಂತರ ಹಳಿಗೇರಾ ಗ್ರಾಮ ಪಂಚಾಯತಿಯ ಮಸ್ಕನಳಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ವಹಣೆ, ನರೇಗಾ ಯೋಜನೆಯಡಿ ಪ್ರತಿ ಮನೆಗೂ ಅನುಷ್ಠಾನ ಮಾಡುತ್ತಿದ್ದ ಬಚ್ಚಲು ಗುಂಡಿ ನಿರ್ಮಾಣ ಹಾಗೂ ಜಲ ಜೀವನ್ ಮಿಷನ್ ಯೋಜನೆಯಡಿ ಪ್ರಗತಿಯಲ್ಲಿದ್ದ ಕಾಮಗಾರಿಗಳ ಗುಣಮಟ್ಟ ಹಾಗೂ ಭೌತಿ ಸ್ಥಿತಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಯಾದಗಿರಿ ಜಿಪಂ ಯೋಜನಾ ನಿರ್ದೇಶಕರಾದ ಸಿ.ಬಿ.ದೇವರಮನಿ, ಯಾದಗಿರಿ ತಾಪಂ ಕಾರ್ಯನಿರ್ವಹಕ ಅಧಿಕಾರಿ ಮಹಾದೇವ ಬಾಬಳಗಿ, ಸಹಾಯಕ ನಿರ್ದೇಶಕ ಮಲ್ಲಣ್ಣ ಸಂಕನೂರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಪಂ ಸದಸ್ಯರು, ತಾಂತ್ರಿಕ ಸಹಾಯಕರು, ಶಾಲಾ ಶಿಕ್ಷಕರು, ಗ್ರಾಮ ಪಂಚಾಯಿತಿ ಸಿಬ್ಬಂದಿ, ಗ್ರಾಮಸ್ಥರು ಉಪಸ್ಥಿತರಿದ್ದರು.

## ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ, ಆಶಾ ಕಾರ್ಯಕರ್ತೆಯರಿಗೆ

# ನವಜಾತ ಶಿಶು ಆರೈಕೆ ಸ್ವಚ್ಛತೆ ಸೇವೆ ಮುಟ್ಟಿನ ಕಪ್‌ಗಳ ಕುರಿತು ತರಬೇತಿ ಕಾರ್ಯಗಾರ

**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ : ಸೆಪ್ಟೆಂಬರ್ 25 : ತಾಯಂದಿರು ಮಕ್ಕಳ ಪಾಲನ ಪೋಷಣೆ ಕಡೆಗೆ ಗಮನಿಸಿ ಮನೆಯ ಒಳಗೆ ಹೊರಗಡೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು, ಮಹಿಳೆಯರು, ಆರೋಗ್ಯದ ಹಿತದೃಷ್ಠಿಯಿಂದ ಮುಟ್ಟಿನ ಕಪ್ಪನ್ನು ಬಳಕೆಸಬೇಕು, ಮುಟ್ಟಿನ ಸ್ವಚ್ಛತೆಕಡೆಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಯಾದಗಿರಿ ಜಿಲ್ಲಾ ಪಂಚಾಯತ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ್ ಒರಡಿಯಾ ಅವರು ಹೇಳಿದರು.

ನಗರದ ಯಾದಗಿರಿ ವೈದ್ಯಕಿಯ ವಿಜ್ಞಾನಗಳ ಸಂಸ್ಥೆಯ ಸಭಾಂಗಣದಲ್ಲಿ ಇತ್ತೀಚಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಯಾದಗಿರಿ ಜಿಲ್ಲಾ ವೈದ್ಯಕೀಯ ಶಿಕ್ಷಣ ಇಲಾಖೆ, ನೀರು ಮತ್ತು ನೈರ್ಮಲ್ಯ ಶುಚಿತ್ವ ಘಟಕ ಸ್ವಚ್ಛ ಭಾರತ್ ಮಶಿನ್ ಸಹಯೋಗದಲ್ಲಿ "ನವಜಾತ ಶಿಶು ಆರೈಕೆ," "ಸ್ವಚ್ಛತೆ ಸೇವೆ 2025" "ಮುಟ್ಟಿನ ಸ್ವಚ್ಛತೆ ಹಾಗೂ ಕಪ್‌ಗಳ ಬಳಕೆ ಕುರಿತು ಒಂದು ದಿನದ ತರಬೇತಿ ಕಾರ್ಯಗಾರದಲ್ಲಿ ಅವರು ಮಾತನಾಡಿದರು.



ಆರೋಗ್ಯ ಸುರಕ್ಷತಾಧಿಕಾರಿ, ಆಶಾ ಕಾರ್ಯಕರ್ತೆಯರಿಗೆ "ನವಜಾತ ಶಿಶು ಆರೈಕೆ," "ಸ್ವಚ್ಛತೆ ಸೇವೆ 2025" "ಮುಟ್ಟಿನ ಸ್ವಚ್ಛತೆ ಹಾಗೂ ಕಪ್‌ಗಳ ಬಳಕೆ ಕುರಿತು ಒಂದು ದಿನದ ತರಬೇತಿ ಕಾರ್ಯಗಾರದಲ್ಲಿ ಈ ನವಜಾತ ಶಿಶುವಿನ ಆರೈಕೆ ಎಂದರೆ ಮಗುವಿನ ಜನನ ನಂತರ ಮೊದಲ 28 ದಿನಗಳಲ್ಲಿ (ನವಜಾತ ಅವಧಿ) ಮಗುವಿನ ಆರೋಗ್ಯವನ್ನು ಕಾಪಾಡುವ ಮತ್ತು ಅದಕ್ಕೆತಕ್ಕುದಾದ ಪೋಷಣೆಯನ್ನು ಒದಗಿಸುವ ಪ್ರಕ್ರಿಯೆಯಾಗಿದೆ. ಇದರಲ್ಲಿ ಸ್ವಚ್ಛತೆ, ತಾಪಮಾನ ನಿಯಂತ್ರಣ, ಲಸಿಕೆಗಳು, ಎದೆ ಹಾಲುಣಿಸುವುದು, ಮತ್ತು ಮಗುವಿನ ಚಟುವಟಿಕೆಗಳ ಮೇಲೆ ನಿಗಾ ವಹಿಸುವುದರೊಂದಿಗೆ, ತಾಯಿಗೆ ಭಾವನಾತ್ಮಕ ಬೆಂಬಲ ನೀಡುವುದು ಸೇರಿದೆ ತಾಯಂದಿರು ಮಕ್ಕಳ ಪಾಲನ ಪೋಷಣೆ ಕಡೆಗೆ ಗಮನ ಹರಿಸಬೇಕು. ಮನೆಯ ಒಳಗೆ ಮತ್ತು ಹೊರಗಡೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ಮಹಿಳೆಯರು, ಆರೋಗ್ಯದ ಹಿತದೃಷ್ಠಿಯಿಂದ ಮುಟ್ಟಿನ ಕಪ್ಪನ್ನು ಬಳಕೆಸಬೇಕು, ಮುಟ್ಟಿನ ಸ್ವಚ್ಛತೆಕಡೆಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಗಳಾದ ಡಾ.ಮಹೇಶ ಬಿರಾದಾರ ಅವರು ಮಾತನಾಡಿದರು, ನವಜಾತ ಶಿಶು ಆರೈಕೆಯ ಕಡೆ ಹೆಚ್ಚಿನ ಆದ್ಯತೆ ನೀಡಬೇಕು, ಗರ್ಭಿಣಿ ಹಾಗೂ ತಾಯಂದಿರಿಗೆ ಶಿಶುಗಳ ಆರೈಕೆ ಕುರಿತು ಅರಿವು ಮೂಡಿಸಬೇಕು. ಮಹಿಳೆಯರು ಪೌಷ್ಟಿಕ ಆಹಾರ ಸೇವಿಸಬೇಕು ರಕ್ತ ಹಿನತೆಯನ್ನು ತಡೆಗಟ್ಟಬೇಕು, ಸ್ವಚ್ಛತೆ ಕಾಪಾಡಿಕೊಳ್ಳಬೇಕು, ನೀರು ನೈರ್ಮಲ್ಯ ಮತ್ತು ಶುಚಿತ್ವದ ಕಡೆಗೆ ಗಮನ ಹರಿಸಬೇಕು ಎಂದು ತಿಳಿಸಿದರು.

ಯಾದಗಿರಿ ಯಿಮ್ಸ ಸಂಸ್ಥೆಯ ನಿರ್ದೇಶಕರಾದ ಡಾ.ಸಂದೀಪ ಪಾಟೀಲ್ ಅವರು ಮಾತನಾಡಿ, ಜಿಲ್ಲೆಯ ನವಜಾತ ಶಿಶುಗಳ ಪಾಲನೆ ಪೋಷಣೆ ಬಹು ಮುಖ್ಯವಾಗಿದ್ದು ತಾಯಿ ಮತ್ತು ಮಗುವಿನ ಸ್ವಚ್ಛತೆ ಕಡೆಗೆ ಗಮನ ಹರಿಸಬೇಕು ಸಾವು ನೋವುಗಳು ಆಗದಂತೆ ನೊಡಿಕೊಳ್ಳಬೇಕು, ಮಹಿಳೆಯರು ಮುಟ್ಟಿನ ಕಪ್ಪನ್ನು ಬಳಕೆ ಮಾಡುವದರಿಂದ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಯಾದಗಿರಿ ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ರಿಜ್ವಾನಾ ಆಫ್ರೀನ್, ಡಾ.ರಾಜೇಶ್ವರಿ ಗುತೆ–ದಾರ, ನವಜಾತು ಶಿಶು ಆರೈಕೆ, ಮುಟ್ಟಿನ ಸ್ವಚ್ಛತೆ ಕಪ್‌ಗಳ ಬಳಕೆ, ಹಾಗೂ ಪರಿಸರ ಸ್ವಚ್ಛತೆ ಕುರಿತು ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ತಾಲೂಕ ಆರೋಗ್ಯ ಅಧಿಕಾರಿ ಡಾ.ಹನುಮಂತ ರೆಡ್ಡಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಲಕ್ಷ್ಮೀ ಮುಂಡಾಸ, ಡಾ.ಕುಮಾರ ಅಂಗಡಿ, ಆರೋಗ್ಯ ಇಲಾಖೆಯ, ಸಿಬ್ಬಂದಿಗಳು, ಆಶಾಕಾರ್ಯಕರ್ತೆಯರು ಕಾಲೇಜಿನ ಉಪನ್ಯಾಸಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು. ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿ ತುಳಸಿರಾಮ ಚವ್ಹಾಣ ಕಾರ್ಯಕ್ರಮ ನೀರೂಪಿಸಿ, ವಂದಾರ್ಪಣೆ ನೆರವೇರಿಸಿದರು. ಡಿ.ಪಿ.ಎಮ್ ಮನೋಹರ್ ಪಾಟೀಲ್ ಸ್ವಾಗತಿಸಿದರು.

## ರಾಷ್ಟ್ರೀಯ ಪೌಷ್ಟಿಕ ಆಹಾರ ಸಪ್ತಾಹ ಆಚರಣೆ



**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ : ಸೆಪ್ಟೆಂಬರ್ 25– : ಹಣ್ಣು, ತರಕಾರಿ ಹಸಿರು ಸೊಪ್ಪುಗಳನ್ನು ದಿನನಿತ್ಯ ಆಹಾರದಲ್ಲಿ ಬಳಸುವದರಿಂದ ಅಪೌಷ್ಟಿಕತೆಯನ್ನು ಹೋಗಲಾಡಿಸುವದರ ಜೊತೆ–ಗೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಯಾದಗಿರಿ ತೋಟಗಾರಿ–ಕೆ ವಿಸ್ತರಣಾ ಶಿಕ್ಷಣ ಘಟಕ ಮುಖ್ಯಸ್ಥರು ಡಾ.ಶಶಿಕಲಾ. ಎಸ್.ರುಳಿ ಅವರು ಹೇಳಿದರು.

ಯಾದಗಿರಿ ಜಿಲ್ಲೆಯ ಹತ್ತಿಕುಣಿ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರೌಢಶಾಲೆಯಲ್ಲಿ ಇತ್ತೀಚಿನ ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ, ರಾಷ್ಟ್ರೀಯ ಪೌಷ್ಟಿಕ ಆಹಾರ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉತ್ತಮ ಜೀವನಕ್ಕಾಗಿ ಸರಿಯಾದ ಆಹಾರ ಸೇವಿಸುವದು ಬಹಳ ಮುಖ್ಯವಾಗಿದ್ದು, ಸ್ಥಳೀಯವಾಗಿ ದೊರಕುವಂತಹ ಹಣ್ಣು, ತರಕಾರಿ ಹಸಿರು ಸೊಪ್ಪುಗಳನ್ನು ದಿನನಿತ್ಯ ಆಹಾರದಲ್ಲಿ ಬಳಸುವದರಿಂದ ಅಪೌಷ್ಟಿಕತೆಯನ್ನ ಹೋಗಲಾಡಿಸುವದರ ಜೊತೆ–ಗೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶಾಲೆಯ ಮುಖ್ಯೋಪಾಧ್ಯಾಯರಾದ ನಾಗರೆಡ್ಡಿ ಅಕ್ಕಿ ಅವರು ಇಂತಹ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೈಗೊಳ್ಳಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಅತಿಥಿಗಳಾಗಿ ಆಗಮಿಸಿದ ಯಾದಗಿರಿ ಜಿಲ್ಲಾ ಗ್ರಾಹಕರ ವೇದಿಕೆ ಅಧ್ಯಕ್ಷರು ಶ್ರೀಮತಿ ಮಾಲತಿ ರೇಷ್ಮಿ, ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಶಾಲೆಯ ಸಿಬ್ಬಂದಿ ವರ್ಗ, ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸಾರ್ವಜನಿಕ ಆರೋಗ್ಯವನ್ನು ಕಾಪಾಡುವಲ್ಲಿ ಪೌರ ಕಾರ್ಮಿಕರ ಪಾತ್ರ ಅಮೂಲ್ಯ..!

**ಮಲ್ಲಮ್ಮ ನುಡಿ ವಾರ್ತೆ**

ಕುಕನೂರು : ಪೌರಾಡಳಿತ ಇಲಾಖೆ, ನಗರಾಭಿವೃದ್ಧ ಕೋಶ, ಕುಕನೂರು ಪಟ್ಟಣ ಪಂಚಾಯತಿ ಹಾಗೂ ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘ (ರಿ.) ಕುಕನೂರು ಸಮಿತಿ ವತಿಯಿಂದ ಇಂದು ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪೌರ ಕಾರ್ಮಿಕರಿಗೆ ವಿಶೇಷ ಉಡುಗೆರೆ ನೀಡಿ ಗೌರವಿಸಿದರು.



ಈ ಕಾರ್ಯಕ್ರಮದ ಕುರಿತು ಮಾತನಾಡಿದ ಪಟ್ಟಣ ಪಂಚಾಯಿತಿ ಸದಸ್ಯ ಗುದ್ನೇಪ್ಪ ನೋಟಗಾರ್, 'ಪೌರ ಕಾರ್ಮಿಕರ ದಿನಾಚರಣೆ–ಯಂದು, ಸ್ವಚ್ಛತೆಗಾಗಿ ಶ್ರಮಿಸುವ ಪೌರಕಾರ್ಮಿಕರನ್ನು ಅಭಿನಂದಿಸಬೇಕು ಹಾಗೂ ಅವರ ಸೇವೆಗೆ ಗೌರವ ಸಲ್ಲಿಸಬೇಕು. ನಗರಗಳನ್ನು ಸ್ವಚ್ಛವಾಗಿಟ್ಟು, ಸಾರ್ವಜನಿಕ ಆರೋಗ್ಯವನ್ನು ಕಾಪಾಡುವಲ್ಲಿ ಅವರ ಪಾತ್ರ ಅಮೂಲ್ಯ ಎಂಬುದನ್ನು ಸ್ಮರಿಸಬೇಕು. ಅವರ ನಿಷ್ಠಾವಂತ ಮತ್ತು ತ್ಯಾಗದ ಸೇವೆಯನ್ನು ಶ್ಲಾಘನೀಯವಾಗಿದೆ ಎಂದರು.

ಪಟ್ಟಣ ಪಂಚಾಯಿತಿ ಸದಸ್ಯ ಸಿದ್ಧಲಿಂಗಯ್ಯ ಉಳಾಗಡ್ಡಿ ಮಾತನಾಡಿ, 'ದೇಶದ ಇತಿಹಾಸದಲ್ಲೇ ಮೊದಲ ಬಾರಿ ಪೌರಕಾರ್ಮಿಕರ ಪಾದಪೂಜೆ ಮಾಡಿದ ಪ್ರಧಾನಿ ಎಂಬ ಖ್ಯಾತಿಗೆ ನರೇಂದ್ರ ಮೋದಿ ಪಾತ್ರರಾಗಿದ್ದರು, ಅದೇ ಸಂಪ್ರದಾಯವನ್ನು ನಮ್ಮ ಬಿಜೆಪಿ ಮಹಿಳಾ ಮೋರ್ಚಾದ ಕಾರ್ಯಕರ್ತೆಯರು ಮುಂದುವರೆಸುತ್ತಾ ಹೋಗುತ್ತಿದ್ದಾರೆ. ಒಬ್ಬ ಪ್ರಧಾನಿಯಿಂದ ಪಾದ ಪೂಜೆ ಮಾಡಿಸಿಕೊಳ್ಳುವ ಸರ್ಕಾರಿ ನೌಕರರು ಅಂದರೆ ಬಹಳ ಹೆಮ್ಮೆ ಪಡುವ ವಿಷಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘ (ರಿ.) ಕುಕನೂರು ತಾಲೂಕಾ ಸಮಿತಿ ಅಧ್ಯಕ್ಷೆ ಈರಮ್ಮ ಘಾಟಿ, ಪಟ್ಟಣ ಪಂಚಾಯತಿ ಅಧ್ಯಕ್ಷೆಯ ಪುತ್ರ ಮಂಜುನಾಥ್ ಯಡಿಯಾಪುರ, ಉಪಾಧ್ಯಕ್ಷೆ ಪ್ರಶಾಂತ್ ಆರಬೆಳ್ಳಿನ್, ಪಟ್ಟಣ ಪಂಚಾಯತಿ ಮುಖ್ಯಧಿಕಾರಿ ನಬಿಸಾಬ್ ಕಂದಗಲ್, ಪರಿಸರ ಪ್ರೇಮಿ ವಿರೇಶ್, ಮುಖಂಡ ಮಾಲತೇಶ್, ಸಿದ್ದಪ್ಪ ದೊಡ್ಡಮನಿ, ವಿರೇಶ್ ಸಬರದ್, ಜಗನ್ನಾಥ ಭೋವಿ ಹಾಗೂ ಸದಸ್ಯರು ಪೌರಕಾರ್ಮಿಕರು ಭಾಗವಹಿಸಿದರು.

# ಸ್ಥಳೀಯ ಶಾಸಕರು ಕ್ಷೇತ್ರದ ವಾಸ್ತವ, ಜನರ ಸ್ಥಿತಿಗತಿ ತಿಳಿದು ಹೆಜ್ಜೆ ಇಡಲಿ : ಜಿಲ್ಲಾ ವಕ್ತಾರಾ ಮಲ್ಲನಗೌಡ ಕೋನನಗೌಡ

**ಮಲ್ಲಮ್ಮ ನುಡಿ ವಾರ್ತೆ**

ಕುಕನೂರ : ತಾಲೂಕಿನ ಪಟ್ಟಣದ 19ನೇ ವಾರ್ಡ್ ಗುದ್ನೆಪ್ಪನಮಠದಲ್ಲಿ ಭಾರತೀಯ ಜನತಾ ಪಕ್ಷ ಯಲಬುರ್ಗಾ ಮಂಡಲ ಹಾಗೂ ಕುಕುನೂರು ತಾಲೂಕ ಜಾತ್ಯಾತೀತ ಜನತಾದಳದ ವತಿಯಿಂದ ರಸ್ತೆಯಲ್ಲಿರುವ ಗುಂಡಿಗಳನ್ನು ವಿರೋಧಿಸಿ ರಾಜ್ಯ ಸರ್ಕಾರದ ವಿರುದ್ಧ ರಸ್ತೆ ದುರಸ್ತಿಗೊಳಿಸಿ, ಜನರ ಜೀವ ಉಳಿಸಿ ಎಂಬ ಘೋಷವಾಕ್ಯದೊಂದಿಗೆ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು.

ಭಾರತೀಯ ಜನತಾ ಪಾರ್ಟಿಯ ಮುಖಂಡರಾದ ಮಂಜುನಾಥ್ ನಾಡಗೌಡ್ರ ಮಾತನಾಡುತ್ತಾ ಕರ್ನಾಟಕ ರಾಜ್ಯವು ಭ್ರಷ್ಟಾಚಾರದಿಂದ ನಲಗುತ್ತಿದ್ದು ನಂಬರ್ ಒನ್ ಭ್ರಷ್ಟಾಚಾರ ರಾಜ್ಯ ಎಂಬ ಅಪಕೀರ್ತಿಗೆ ರಾಜ್ಯ ಸರ್ಕಾರ ಕಾರಣವಾಗಿದೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯದ ಜನತೆಗೆ ಬೆಲೆ ಏರಿಕೆ ಸೇರಿದಂತೆ ಎಲ್ಲಾ ತರಹದ ಬರೆ ಎಳೆಯುತ್ತಿದ್ದು ರಾಜ್ಯಾದ್ಯಂತ ಯಾವುದೇ ಅಭಿವೃದ್ಧಿ ಪರ ಕಾರ್ಯಗಳು ನಡೆಯದೇ ಇರುವುದನ್ನು ಯಾರಾದರೂ ಪ್ರಶ್ನಿಸಿದರೆ ಪಂಚಗ್ಯಾರಂಟಿ ನೀಡುತ್ತೇವೆ ಎಂದು ಹೇಳುತ್ತಿದ್ದು ಇಂತಹ ಬ್ರಷ್ಟಾಚಾರ ಮತ್ತು ಬೆಲೆ ಏರಿಕೆಯ ಬಿಸಿ ಮುಟ್ಟಿಸುವಂತಹ ಪಂಚ ಗ್ಯಾರಂಟಿಯನ್ನು ರಾಜ್ಯದ ಯಾವ ಜನತೆಯು ವ್ಯಕ್ತಿಯು ಕೇಳಿರಲಿಲ್ಲ ಅಧಿಕಾರ ಗಿಟ್ಟಿಸಿಕೊಳ್ಳುವ ನಿಟ್ಟಿನಲ್ಲಿ ಭರವಸೆ ನೀಡಿ ಅದನ್ನು ಅನುಷ್ಠಾನ ತರುತ್ತದೆ ಜನರ ಜೀವದ ಜೊತೆ ಚೆಲ್ಲಾಟ ಆಟವಾಡುತ್ತಿದ್ದಾರೆ. ರಾಜ್ಯದ್ಯಂತ ರಸ್ತೆಗಳು ತಗ್ಗು ಗುಂಡಿಗಳಿಂದ ತುಂಬಿದ್ದು ಇಂತಹ ಗುಂಡಿಗಳಿಂದ ಹಲವಾರು ಜನ ಪ್ರಾಣ ಕಳೆದುಕೊಂಡಿದ್ದು ನಾವು ಪ್ರತಿಭಟಿಸುತ್ತಿರುವ ಸ್ಥಳದಲ್ಲಿಯೇ ಕಳೆದ ಕೆಲವು ದಿನಗಳ ಹಿಂದೆ ಒಬ್ಬ ಕಾರ್ಮಿಕ ಈ ರಸ್ತೆಗೆ ಬಲಿಯಾಗಿರುವುದು ವಿಪರ್ಯಾಸದ ಸಂಗತಿಯಾಗಿದ್ದು ಇದಕ್ಕೆಲ್ಲ ಕಾಂಗ್ರೆಸ್ ಸರ್ಕಾರವೇ ನೇರಹೊಣೆ ಎಂದರು.




ನಂತರ ಮಾತನಾಡಿದ ಜಾತ್ಯತೀತ ಜನತಾದಳದ ಜಿಲ್ಲಾ ವಕ್ತಾರ ಮಲ್ಲನಗೌಡ ಕೋನನಗೌಡ್ರು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು ಇದರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನಿಸಿದರೆ ಬೆದರಿ–ಕೆಯ ಕರೆಗಳು ಬರುತ್ತಿದ್ದು ಇನ್ನೂ ಮುಂದುವರೆದರೆ ಪೊಲೀಸರಿಂದ ಎಫ್‌ಐಆರ್ ಮಾಡಿಸಿ ರೌಡಿಶೀಟರ್ ಪಟ್ಟ ಕಟ್ಟುತ್ತಿರುವುದು ನಿಜಕ್ಕೂ ವಿಪರ್ಯಾಸದ ಸಂಗತಿಯಾಗಿದೆ ಸರ್ಕಾರ ನಡೆಸುತ್ತಿರುವವರ ಮುಖವಾಡ ಕಳಚಿ ಅಸಲಿತನವನ್ನು ತೋರಿಸುವಂತಿದೆ.

**ಕುಕನೂರು ಪಟ್ಟಣದಲ್ಲಿ ಆಯೋಜಿಸಿದ್ದ ಭಾರತೀಯ ಜನತಾ ಪಾರ್ಟಿ ಯಲಬುರ್ಗಾ ಮಂಡಲ ಹಾಗೂ ಕುಕನೂರ ನಲ್ಲಿ ನೆಡೆದ ಪ್ರತಿಭಟನೆ ವಿಷಯಕ್ಕೆ ಸಂಬಂಧಿಸಿದಂತೆ ವರದಿಗಾರರಿಗೆ ಕಾಂಗ್ರೆಸ್ ತಾಲೂಕ ವಕ್ತಾರ ಸಂಗಮೇಶ ಗುತ್ತಿ ಮಾತನಾಡುತ್ತಾ ಬಿಜೆಪಿಯ ಮಿತ್ರರು 2013ರಿಂದ 2018ರ ಅವಧಿಯಲ್ಲಿ ಶಾಸಕರಾಗಿದ್ದ ಬಸವರಾಜ ರಾಯರೆಡ್ಡಿ ಅವರ ಆಡಳಿತ ಅವಧಿಯಲ್ಲಿ ನಿರ್ಮಾಣಗೊಂಡ ರಸ್ತೆಗಳನ್ನು ಹಾಗೂ 2018 ರಿಂದ 2023 ರ ವರೆಗೆ ಶಾಸಕರಾಗಿದ್ದ ಹಾಲಪ್ಪ ಆಚಾರ ಅವರ ಅವಧಿಯಲ್ಲಿ ನಿರ್ಮಾಣವಾದ ರಸ್ತೆಗಳನ್ನು ದಾಖಲಾತಿ ಸಮೇತ ಗುಣಮಟ್ಟಗಳನ್ನು ಪರಿಶೀಲನೆ ಮಾಡಿಕೊಳ್ಳಲಿ ಎಂದು ಹೇಳಿದರು.**

ಕ್ಷೇತ್ರದ ಶಾಸಕರು ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಆಗಿರುವ ಬಸವರಾಜ ರಾಯರೆಡ್ಡಿ ಅವರು ಕ್ಷೇತ್ರದ ವಾಸ್ತವ ಸ್ಥಿತಿಗತಿ ತಿಳಿದುಕೊಂಡು ಹೆಜ್ಜೆ ಇಡಲಿ. ಕೇವಲ ಬೆಂಗಾವಲು ಪಡೆ ವಾಹನದ ಹಿಂದೆ ಸುತ್ತಾಡುತ್ತಾ ಇದ್ದರೆ ವಾಸ್ತವ ಸ್ಥಿತಿಗತಿ ಅರ್ಥವಾಗುವುದಿಲ್ಲ. ವಾಸ್ತವಂಶವನ್ನು ತಿಳಿದು ರಸ್ತೆ ಗುಂಡಿಗಳಿಗೆ ಕನಿಷ್ಠ ಪ್ಯಾಚ್ ಮಾಡಿಸುವ ಕಾರ್ಯ ಮಾಡಲಿ ಎಂದು ಹೇಳಿದರು.

ಈ ವೇಳೆಯಲ್ಲಿ ಭಾರತೀಯ ಜನತಾ ಪಕ್ಷದ ಯಲಬುರ್ಗಾ ಮಂಡಲ ಅಧ್ಯಕ್ಷ ಮಾರುತಿ ಗಾವಾರಾಳ, ಪ್ರಮುಖರಾದ ಅನಿಲ್ ಆಚಾರ ಅಮರೇಶ್ ಹುಬ್ಬಳ್ಳಿ, ನಾಗರಾಜ ವೆಂಕಟಾಪುರ, ಶಿವಕುಮಾರ್ ನಾಗಲಾಪುರಮಠ, ಸಿದ್ದಯ್ಯ ಉಳ್ಳಾಗಡ್ಡಿ, ಮಹಾಂತೇಶ್ ಹೂಗಾರ್, ಶರಣಪ್ಪ ಈಳಿಗೆರ, ಪ್ರಕಾಶ್ ತಹಸಿಲ್ದಾರ್, ಶಿವರಾಜ ಗೌಡ, ಬಸವರಾಜ್ ಹಾಳಕೇರಿ, ಮಹೇಶ್ ಕಲ್ಮಠ, ಲಕ್ಷ್ಮಣ್ ಕಾಳಿ, ಮುತ್ತು ತಳವಾರ, ಶರಣಯ್ಯ ಹುಣಸಿಮರದ ಸಿದ್ದಲಿಂಗಯ್ಯ ಬಂಡಿ , ಶಂಕರ್, ಪ್ರವೀಣ ಬಿಡ್ನಾಳ, ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

# ಮಾದಕ ವಸ್ತುಗಳ ಬಳಕೆ ನಿಯಂತ್ರಣಕ್ಕೆ ಸಮನ್ವಯ ಅಗತ್ಯ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.25–ಜಿಲ್ಲೆಯಲ್ಲಿ ಮಾದಕ ವಸ್ತುಗಳ ಸಾಗಾಣಿಕೆ, ಮಾರಾಟ ಹಾಗೂ ಅವುಗಳ ಬಳಕೆಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ವಿವಿಧ ಇಲಾಖೆಗಳ ಸಮನ್ವಯ ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ರಾಷ್ಟ್ರೀಯ ಮಾದಕ ದ್ರವ್ಯಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮಾದಕ ವಸ್ತುಗಳಿಗೆ ಯುವ ಸಮುದಾಯ ಹೆಚ್ಚು ಆಕರ್ಷಿತವಾಗುತ್ತಿದೆ. ಇವುಗಳ ಬಳಕೆಯಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಬಗಗೆ ಅರಿವು ಮೂಡಿಸುವ ಕಾರ್ಯವಾಗಬೇಕಿದೆ. ಮಾದಕ ವಸ್ತುಗಳಿಂದ ದೂರ ಉಳಿಯುವಂತೆ ಮಾಡಲು ಕಾರ್ಯಕ್ರಮಗಳ ಹಮ್ಮಿಕೊಳ್ಳಬೇಕು ಎಂದರು.

ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಮಾತನಾಡಿ, ಶಾಲಾ ಕಾಲೇಜುಗಳಲ್ಲಿ ಮಾದಕ ವಸ್ತುಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಹಮ್ಮಿಕೊಂಡ ನಂತರ ಎಷ್ಟು ಪ್ರಮಾಣದಲ್ಲಿ ಉಪಯುಕ್ತವಾಗುತ್ತಿದೆ ಎಂಬ ಬಗ್ಗೆಯೂ ಮಾಹಿತಿ ಕಲೆ ಹಾಕುವ ಕೆಲಸವಾಗಬೇಕು. ತಂಬಾಕು ಉತ್ಪನ್ನಗಳು ಸೇರಿದಂತೆ ಮಾದಕ ವಸ್ತುಗಳ ದುಶ್ಚಟಗಳಿಗೆ ಕಾರ್ಮಿಕರು ವ್ಯಸನಿಗಳಾಗುತ್ತಿದ್ದಾರೆ. ಅವರಲ್ಲಿಯೂ ಅರಿವು ಮೂಡಿಸುವ ಕೆಲಸವಾಗಬೇಕು. ಮಾದಕ ವಸ್ತು ಕಳ್ಳಸಾಗಣೆ ಉದ್ದೇಶಗಳಿಗಾಗಿ ಕೋರಿಯರ್ ಸೇವೆಗಳ ಸರಿಯಾದ ಮೇಲ್ವಿಚಾರಣೆ ಸಹ ಅಗತ್ಯವಾಗಿದೆ ಎಂದರು.

ಕೃಷಿ, ತೋಟಗಾರಿಕೆ, ಅರಣ್ಯ ಇಲಾಖೆ ಸಿಬ್ಬಂದಿ ಆಗಾಗ್ಗೆ ಕೃಷಿ ಜಮೀನು, ತೋಟಗಳಿಗೆ ಭೇಟಿ ನೀಡಿ ಗಾಂಜಾ ಬೆಳೆಗಳನ್ನು ಬೆಳೆಯುತ್ತಿರುವ ಬಗ್ಗೆ ಪರಿಶೀಲಿಸಬೇಕು. ಖಾಸಗಿ ಪಾರ್ಸಲ್ ಸರ್ವಿಸ್‌ಗಳ ಕಚೇರಿಗಳನ್ನು ಹಾಗೂ ಆನ್‌ಲೈನ್ ಮಾರುಕಟ್ಟೆ ಗೋದಾಮುಗಳನ್ನು ಮಾದಕ ವಸ್ತುಗಳನ್ನು ಸರಬರಾಜು ಮಾಡುತ್ತಿರುವ ಬಗ್ಗೆ ಪರಿಶೀಲನೆ ನಡೆಸಬೇಕು. ನಿರ್ಭಂದಿತ ಔಷಧಿಗಳು ಜನಸಾಮಾನ್ಯರಿಗೆಲ್ಲರೂ ಮಾರಾಟ ಮಾಡುವಂತಿಲ್ಲ. ಈ ಬಗ್ಗೆ ಜಿಲ್ಲೆಯ ಔಷಧ ನಿಯಂತ್ರಣ ಅಧಿಕಾರಿಗಳು ಔಷಧಿ ಅಂಗಡಿಗಳ ಬಗ್ಗೆ ಎಚ್ಚರವಹಿಸಬೇಕು. ಜಿಲ್ಲೆಯನ್ನು ಮಾದಕ ವ್ಯಸನ ಮುಕ್ತ ಜಿಲ್ಲೆಯನ್ನಾಗಿಸಲು ಎಲ್ಲರೂ ಕೈ ಜೋಡಿಸಬೇಕಿದೆ ಎಂದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್ ಮಾತನಾಡಿ, ಜಿಲ್ಲೆಯ ಎಲ್ಲ ಶಾಲಾ ಕಾಲೇಜುಗಳಲ್ಲಿ ಮಾದಕ ದ್ರವ್ಯ ನಿಯಂತ್ರಣ ತಂಡಗಳನ್ನು ರಚಿಸಿ ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕಗಳಿಗೆ ಅರಿವು ಮೂಡಿಸುವ ಕೆಲಸವಾಗಬೇಕು. ಕಾಲೇಜು ವಿದ್ಯಾರ್ಥಿ ನಿಲಯಗಳಲ್ಲಿ ರಜೆಯ ದಿನಗಳಲ್ಲಿ ಮನೆಗಳಿಗೆ ಹೋಗಿ ನಂತರ ಹಾಸ್ಟೆಲ್‌ಗಳಿಗೆ ಮರಳಿ ಬರುವ ಸಂದರ್ಭದಲ್ಲಿ ಅವರು ಯಾವುದಾದರೂ ಮಾದಕ ವಸ್ತುಗಳನ್ನು ತೆಗೆದುಕೊಂಡು ಬರುತ್ತಾರಾ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ ಎಂದರು.

ಸಭೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರೇನ್, ಹೆಚ್ಚುವರಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಾದ ಪ್ರಸನ್ನ ದೇಸಾಯಿ, ಮಹಾಂತೇಶ್ವರ ಜಿದ್ದಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಂಜುನಾಥ ಡಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ಜಂಟಿ ಕೃಷಿ ನಿರ್ದೇಶಕ ಲಕ್ಷ್ಮಣ ಕಳ್ಳೆನ್ನವರ, ತೋಟಗಾರಿಕೆ ಉಪನಿರ್ದೇಶಕ ರವೀಂದ್ರ ಹಕಾಟಿ, ಜಿಲ್ಲಾ ಕಾರ್ಮಿಕ ಅಧಿಕಾರಿ ರಮೇಶ ಸುಂಬಡ, ಡಿವಾಯ್‌ಎಸ್‌ಪಿ ಗಜಾನನ ಸುತಾರ ಸೇರಿದಂತೆ ಇತರ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ದೇಶದ ಅಭಿವೃದ್ಧಿಯಲ್ಲಿ ಯುವ ಸಮುದಾಯದ ಪಾತ್ರವಿರಲಿ–ಡಾ.ಗಿರೀಶ




**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.25–ಗಡಿಯಲ್ಲಿ ಯೋಧರು ದೇಶವನ್ನು ರಕ್ಷಿಸುತ್ತಿದ್ದರೆ ಯುವ ಸಮುದಾಯ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ವಿದ್ಯಾಪ್ರಸಾರಕ ಮಂಡಳದ ಗೌರವ ಕಾರ್ಯದರ್ಶಿ ಡಾ.ಗಿರೀಶ ಮಸೂರಕರ ಹೇಳಿದರು.

ಮಂಡಳದ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2ರ ವತಿಯಿಂದ ನಡೆದ ಎನ್.ಎಸ್.ಎಸ್.ಸಂಸ್ಥಾಪನ ದಿನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯುವಕರು ದೇಶದ ಬಗ್ಗೆ ಚಿಂತನೆ ಮಾಡಿ ಬೆಳವಣಿಗೆಗೆ ಕೈಜೋಡಿಸಬೇಕು. ಪರಿಸರ ರಕ್ಷಣೆಗೆ ಹೆಚ್ಚು ಒತ್ತು ನೀಡುವುದರ ಮೂಲಕ ಉತ್ತಮ ಆರೋಗ್ಯವನ್ನು ಸಂಪಾದಿಸಬೇಕು ಎಂದು ಹೇಳಿದ ಡಾ.ಮಸೂರಕರ, ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು, ಸಾಮೂಹಿಕ ಹೊಣೆಗಾರಿಕೆಯನ್ನು ಅರಿಯಲು ಮತ್ತು ಸೇವಾ ಮನೋಭಾವವನ್ನು ಅಳವಡಿಸಿಕೊಳ್ಳಲು ಎನ್‌ಎಸ್‌ಎಸ್ ಸಹಕಾರಿಯಾಗಿದೆ ಎಂದರು.

ಪ್ರಾಚಾರ್ಯ ಶ್ರೀನಿವಾಸ ನರಗುಂದ ಮಾತನಾಡಿ, ನಿಸ್ವಾರ್ಥ ಸೇವೆಯಿಂದ ಮಾನಸಿಕ ನೆಮ್ಮದಿ ಪಡೆಯಬಹುದು. ತಮ್ಮಲ್ಲಿನ ಬುದ್ಧಿ ಶಕ್ತಿ, ಕ್ರಿಯಾ ಶಕ್ತಿ, ಸೃಜನ ಶಕ್ತಿಯನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಉತ್ತಮ ಹವ್ಯಾಸಗಳೊಂದಿಗೆ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಎನ್‌ಎಸ್‌ಎಸ್ ಒಂದು ಉತ್ತಮ ವೇದಿಕೆಯಾಗಿದೆ ಎಂದು ಹೇಳಿದರು.

ರಕ್ಷಿತಾ ಮಸೂತಿ ಪ್ರಾರ್ಥಿಸಿದರು. ಎನ್‌ಎಸ್‌ಎಸ್ ಅಧಿಕಾರಿ ಎಸ್.ಎಂ.ಹಡಪದ ಸ್ವಾಗತಿಸಿದರು. ಕೀರ್ತಿ ದಾಸರ ನಿರೂಪಿಸಿದರು. ಎನ್‌ಎಸ್‌ಎಸ್ ಅಧಿಕಾರಿ ಎಸ್.ವಾಯ್.ಬೊಮ್ಮಣ್ಣವರ ವಂದಿಸಿದರು. ವಿದ್ಯಾರ್ಥಿ ಪ್ರಧಾನ ಕಾರ್ಯದರ್ಶಿ ದಿಲ್‌ಶಾದ ನದಾಫ್ ಇದ್ದರು.

ಇದೇ ಸಂದರ್ಭದಲ್ಲಿ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ಗಾಯತ್ರಿ ಮಡಿವಾಳರ(ಪ್ರಥಮ), ಸಂಗಯ್ಯ ಸಾರಂಗಮಠ ಮತ್ತು ಸುಷ್ಮಿತಾ ಹಂಡರಗಲ್(ದ್ವಿತೀಯ) ಹಾಗೂ ಸಾರಿಯಾ ಜಲಗೇರಿ (ತೃತೀಯ) ಅವರಿಗೆ ಬಹುಮಾನಗಳನ್ನು ನೀಡಲಾಯಿತು.

# ಸೆ.29 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆ

**ಮಲ್ಲಮ್ಮ ನುಡಿ ವಾರ್ತೆ**

ರಾಯಚೂರು ಸೆಪ್ಟೆಂಬರ್ 25: ಇಲ್ಲಿನ ಜಿಲ್ಲಾಡಳಿತದ ವತಿಯಿಂದ ಅಕ್ಟೋಬರ 07 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಆಚರಿಸುವ ಕುರಿತು ಪೂರ್ವಭಾವಿ ಸಿದ್ಧತಾ ಸಭೆಯನ್ನು ಸೆಪ್ಟೆಂಬರ್ 29ರ ಮಧ್ಯಾಹ್ನ 04 ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸಭೆಗೆ ವಿವಿಧ ಸಂಘಟನೆಯ ಮುಖಂಡರು ಹಾಗೂ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಹಾಜರಾಗಿ ಸಲಹೆ ಸೂಚನೆಗಳನ್ನು ನೀಡಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪುರಾಣ, ಪ್ರವಚನ ಆಲಿಕೆಯಿಂದ ನೆಮ್ಮದಿ ಪ್ರಾಪ್ತಿ–ಚಿದಾನಂದ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.25–ಪುರಾಣ,ಪ್ರವಚನ ಆಲಿಕೆಯಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ಪ್ರಾಪ್ತವಾಗುತ್ತದೆಯಲ್ಲದೇ ಶ್ರೇಷ್ಠತೆಯ ಗುಣಗಳನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಗುಳೇದಗುಡ್ಡದ ಚಿದಾನಂದ ದೇವಾಂಗಮಠ ಹೇಳಿದರು.

ತಾಲೂಕಿನ ಶಿರೂರ ಪಟ್ಟಣದಲ್ಲಿ ನೇಕಾರ ಪೇ–ಟೆಯ ದೇವಾಂಗ ಸಮಾಜ ಹಾಗೂ ಬನಶಂಕರಿದೇವಿ ಸೇವಾ ಸಮಿತಿಯವರು ನವರಾತ್ರಿ ಅಂಗವಾಗಿ ಬನಶಂಕರಿದೇವಿ ದೇವಸ್ಥಾನದಲ್ಲಿ ಹಮ್ಮಿಕೊಂಡಿರುವ ದೇವಿ ಪುರಾಣ ಕಾರ್ಯಕ್ರಮದಲ್ಲಿ ಬುಧವಾರ ಮಾತನಾಡಿದ ಅವರು, ನವರಾತ್ರಿಯ ಸಂದರ್ಭದಲ್ಲಿ ದೇವಿ ಪುರಾಣ ಆಲಿಸುವುದರಿಂದ ಮನುಷ್ಯನಲ್ಲಿ ಧಾರ್ಮಿಕ ಹಾಗೂ ಭಕ್ತಿ ಭಾವನೆ ಬೆಳೆಯುತ್ತದೆ ಎಂದರು.

ದೇವಾಂಗ ಸಮಾಜದ ಅಧ್ಯಕ್ಷ ಕಾಶಪ್ಪಗೌಡ ಪ್ಯಾಟಿಗೌಡರ, ಪಾಂಡಪ್ಪ ಹುಲ್ಯಾಳ, ಸಿದ್ದಲಿಂಗೇಶ್ವರ ನೇಕಾರ ಸಂಘದ ಅಧ್ಯಕ್ಷ ಪಾಂಡಪ್ಪ ಬದಾಮಿ, ಮೋಹನ ಹುಲ್ಯಾಳ, ಶಂಕ್ರಪ್ಪ ಬಡನ್ನವರ, ಶಿವಾನಂದ ಚಾಗುಂಡಿ, ಹನಮಂತ ಸ್ವಾಮಿ, ಮೋಹನ ಬ್ಯಾಳಿ, ರಾಮಕೃಷ್ಣ ಕೊಂಗಿ ಸೇರಿದಂತೆ ಸಮಾಜದ ಹಿರಿಯರು, ಯುವಕರು, ಮಹಿಳೆಯರು ಇದ್ದರು.

ಹಿರಿಯ ನಾಗರಿಕರ ದಿನಾಚರಣೆ–ಡಿಸಿ ಸಂಗಪ್ಪ ಚಾಲನೆ

# ಹಿರಿಯರ ಉತ್ಸಾಹದ ಜೀವನಕ್ಕೆ ಕ್ರೀಡಾ ಚಟುವಟಿಕೆ ಅಗತ್ಯ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.25–ವಿಶ್ವಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಜಿಲ್ಲಾಧಿಕಾರಿ ಸಂಗಪ್ಪ ಬುಧವಾರ ಚಾಲನೆ ನೀಡಿದರು.

ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಹಿರಿಯ ನಾಗರಿಕರ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಪ್ರತಿಯೊಬ್ಬ ಹಿರಿಯ ನಾಗರಿಕರು ಕ್ರೀಡೆ ಮತ್ತು ಮನರಂಜನಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ಉತ್ಸಾಹದ ಜೀವನ ನಡೆಸುವಂತೆ ಸಲಹೆ ನೀಡಿದರು. ದೈನಂದಿನ ಕೆಲಸ ಮತ್ತು ಸವಾಲುಗಳಿಂದ ಮನಸ್ಸಿನ ಮೇಲೆ ಉಂಟಾಗುವ ಒತ್ತಡವನ್ನು ಕಡಿಮೆ ಮಾಡಲು ಕ್ರೀಡೆಗಳಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅವಶ್ಯಕವಾಗಿದೆ. ದೈಹಿಕ ವ್ಯಾಯಾಮ, ಯೋಗ ಮತ್ತು ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ದೇಹವನ್ನು ಸದೃಢವಾಗಿ ಇಟ್ಟುಕೊಳ್ಳಬಹುದಾಗಿದೆ ಎಂದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ವೃದ್ದರು ಆರೋಗ್ಯದ ಮಹತ್ವ ಮತ್ತು ಮುಂದಿನ ಪೀಳಿಗೆಗೆ ಮಾರ್ಗದರ್ಶನ ನೀಡುವ ಜವಾಬ್ದಾರಿ ಹೊಂದಿದ್ದಾರೆ. ಆದ್ದ–ರಿಂದ ವೃದ್ದರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವುದರ ಜೊತೆಗೆ, ಸಮಾಜಕ್ಕೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಬೇಕು. ಆರೋಗ್ಯ ಮತ್ತು ದೀರ್ಘಾಯುಷ್ಯದ ಕುರಿತು ಕಾಳಜಿವಹಿಸಿ ಇಂದಿನ ಕಲುಷಿತ ವಾತಾವರಣದಲ್ಲಿ ಆರೋಗ್ಯ ಕಾಪಾಡಿಕೊಳ್ಳುವುದು ಸವಾಲಿನ ಕೆಲಸವಾಗಿದೆ. ಅದಕ್ಕಾಗಿಯೇ ವೃದ್ಧರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸಬೇಕು ಎಂದು ತಿಳಿಸಿದರು. ವೃದ್ದರು ಯುವಕರಿಗೆ ದಾರಿದೀಪವಾಗಬೇಕು. 60–80 ವರ್ಷಗಳ ಜೀವನದಲ್ಲಿ ಹತ್ತು ಹಲವು ಅನುಭವಗಳನ್ನು ಗಳಿಸಿರುವ ವೃದ್ದರು, ತಮ್ಮ ಜ್ಞಾನ ಮತ್ತು ಒಳ್ಳೆಯ ಅನುಭವಗಳನ್ನು ಮುಂದಿನ ಪೀಳಿಗೆಗೆ, ಅಂದರೆ ತಮ್ಮ ಮಕ್ಕಳು, ಮೊಮ್ಮಕ್ಕಳು ಮತ್ತು ಸಮಾಜಕ್ಕೆ ಹಂಚಿಕೊಳ್ಳಬೇಕು ಇದರಿಂದ ಸಮರ್ಥ ಮತ್ತು ಸನ್ಮಾರ್ಗದಲ್ಲಿ ಸಾಗುವ ಯುವ ಪೀಳಿಗೆಯನ್ನು ರೂಪಿಸಲು ಸಹಾಯ ಮಾಡುತ್ತದೆ. ಸಾಮಾಜಿಕ ಮತ್ತು ಮನರಂಜನಾ ಕಾರ್ಯಕ್ರಮಗಳಲ್ಲಿ ಹೆಚ್ಚು ಭಾಗವಹಿಸುವುದರಿಂದ ಮನಸ್ಸಿನಲ್ಲಿ ಸಂತೋಷ ಮತ್ತು ಉತ್ಸಾಹ ಹೆಚ್ಚುತ್ತದೆ ಎಂದು ಸಂಗಪ್ಪ ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಿಲ್ಲಾ ಅಧಿಕಾರಿ ಗಿರಿಜಾ ಪಾಟೀಲ, ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ ಸಿದ್ದಲಿಂಗಪ್ಪ ಗುಳೇದ ಸೇರಿದಂತೆ ಹಿರಿಯ ನಾಯಕರು ಉಪಸ್ಥಿತರಿದ್ದರು.

# ದೀನದಯಾಳ ಉಪಾಧ್ಯಾಯರು ಎಲ್ಲರಿಗೂ ಆದರ್ಶಪ್ರಾಯ–ಭಾಂಡಗೆ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.25–ಆತ್ಮನಿರ್ಭರ ಭಾರತದ ಕನಸುಗಾರ ಪಂಡಿತ ದೀನದಯಾಳ ಉಪಾಧ್ಯಾಯರು ಎಲ್ಲರಿಗೂ ಆದರ್ಶಪ್ರಾಯರು ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ನಗರದ ಶಿವಾನಂದ ಜೀನನಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದಿಂದ ಹಮ್ಮಿಕೊಂಡ ಉಪಾಧ್ಯಾಯರ ಜನ್ಮಸ್ಮರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸಿ ಮಾತನಾಡಿದ ಅವರು, ದೇಶ ಸ್ವಾವಲಂಬಿಯಾಗಬೇಕೆಂದ ಎಂಬುದು ಪಂಡಿತ್ ದೀನದಯಾಳ ಉಪಾಧ್ಯಾಯರ ಕಲ್ಪನೆಯಾಗಿತ್ತು. ಅವರ ಕಲ್ಪನೆಯನ್ನು ನರೇಂದ್ರ ಮೋದಿ ಸಾಕಾರಗೊಳಿಸುತ್ತಿದ್ದಾರೆ ಎಂದರು.

ಮಾಜಿ ಶಾಸಕ ವೀರಣ್ಣ ಚರಂತಿಮಠ ಮಾತನಾಡಿ, ದೀನದಯಾಳ ಏಕಾತ್ಮ ಮಾನವ ದರ್ಶನ, ಅಂತ್ಯೋದಯ ಪರಿಕಲ್ಪನೆಯ ಹರಿಕಾರರಾಗಿದ್ದರು. ಸಾವಿನಲ್ಲೂ ಸಂದೇಶ ಬಿಟ್ಟುಹೋದ ರಾಷ್ಟ್ರವಾದಿ ನಾಯಕ ಪಂಡಿತ್ ದೀನದಯಾಳ್ ಉಪಾಧ್ಯಾಯರು ಲಕ್ಷಾಂತರ ಕಾರ್ಯಕರ್ತರಿಗೆ ಸರ್ವಕಾಲಿಕ ಪ್ರೇರಣಾ ಸ್ವರೂಪಿಯಾಗಿದ್ದು ಅವರ ಜೀವನ ಹಾಗೂ ಸಂದೇಶಗಳು ದಾರಿದೀಪವಾಗಿವೆ ಎಂದರು.

ಮುಖಂಡರಾದ ಜಿ.ಎನ್.ಪಾಟೀಲ, ಡಾ.ಎಂ.ಎಸ್.ದಡ್ಡೇನವರ, ಗುಂಡೂ ಶಿಂಧೆ, ರಾಜು ನಾಯ್ಕರ, ರಾಜು ರೇವಣಕರ್, ಬಸವರಾಜ್ ಯಂಕಂಚಿ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಉಪಾಧ್ಯಕ್ಷೆ ಶೋಭಾ ರಾವ, ಜ್ಯೋತಿ ಭಜಂತ್ರಿ, ಸರಸ್ವತಿ ಕುರಬರ, ಶಶಿಕಲಾ ಮಜ್ಜಗಿ, ಶಿವಲೀಲಾ ಪಟ್ಟಣಶೆಟ್ಟಿ, ಬಸವರಾಜ ಹುನಗುಂದ, ಸುರೇಶ ಕೊಣ್ಣೂರ, ರಾಜು ಮುದೇನೂರ, ಉಮೇಶ ಹಂಚಿನಾಳ ಸೇರಿದಂತೆ ಅನೇಕರು ಇದ್ದರು.

# ವಾಲ್ಮೀಕಿ ಜಯಂತಿ ಅದ್ದೂರಿ ಆಚರಣೆಗೆ ನಿರ್ಧಾರ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.25–ಜಿಲ್ಲೆಯಲ್ಲಿ ಅಕ್ಟೋಬರ 7 ರಂದು ಆಚರಿಸಲ್ಪಡುವ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಜಿಲ್ಲಾಡಳಿತದಿಂದ ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ವಾಲ್ಮೀಕಿ ಜಯಂತಿ ಆಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂದು ಬೆಳಿಗ್ಗೆ ಜಿಲ್ಲಾಡಳಿತದಿಂದ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ನಡೆಯಲಿದೆ.

ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಲಿದ್ದು, ತಂಡಗಳನ್ನು ಆಹ್ವಾನಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಿಗೆ ತಿಳಿಸಿದರು. ಮೆರವಣಿಗೆ ಮಾರ್ಗವನ್ನು ಸ್ವಚ್ಛಗೊಳಿಸಲು ನಗರಸಭೆಗೆ ಸೂಚಿಸಿದರು. ವಾಲ್ಮೀಕಿ ಅವರ ಕುರಿತು ಉಪನ್ಯಾಸ ನೀಡಲು ಉತ್ತಮ ಉಪನ್ಯಾಸಕರನ್ನು ಆಹ್ವಾನಿಸಲು ತಿಳಿಸಿದರು.

ವೇದಿಕೆ ಕಾರ್ಯಕ್ರಮ ನವನಗರದ ಮಹರ್ಷಿ ವಾಲ್ಮೀಕಿ ಭವನದಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದ್ದು, ವೇದಿಕೆ ಸಿದ್ದತೆ, ಅಲಂಕಾರ ಮಾಡಲು ಕ್ರಮವಹಿಸಲು ತಿಳಿಸಿದರು. ಶಿಷ್ಠಾಚಾರ ಪ್ರಕಾರ ಆಮಂತ್ರಣ ಪತ್ರಿಕೆ ಮುದ್ರಣ ಹಾಗೂ ವಿತರಣೆ, ಕಾನೂನು ವ್ಯವಸ್ಥೆ ಕಾಪಾಡಲು ಪೋಲೀಸ್ ವ್ಯವಸ್ಥೆ ಪೋಲೀಸ್ ಇಲಾಖೆಗೆ ತಿಳಿಸಲಾಯಿತು. ಜಿಲ್ಲೆಯ ಎಲ್ಲ ತಾಲೂಕಾ ಕೇಂದ್ರಗಳಲ್ಲಿ ಹಾಗೂ ಜಿಲ್ಲೆಯ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ನಿರ್ದೇಶನ ನೀಡುವುದಾಗಿ ತಿಳಿಸಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ದ್ವಿತೀಯ ವರ್ಷದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಲ್ಲಿ ಅತೀ ಹೆಚ್ಚು ಅಂಕ ಪಡೆದು ಜಿಲ್ಲೆಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲು ತೀರ್ಮಾನಿಸಲಾಗಿದ್ದು, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ವಿದ್ಯಾರ್ಥಿಗಳ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಮೇಶ ಚವ್ಹಾಣ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಸಭೆಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಕೃಷಿ ಜಂಟಿ ನಿರ್ದೇಶಕ ಲಕ್ಷ್ಮಣ ಕಳ್ಳೆನ್ನವರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಂಜುನಾಥ ಡಿ ಸೇರಿದಂತೆ ಸಮುದಾಯದ ಮುಖಂಡರಾದ ದ್ಯಾಮಣ್ಣ ಗಾಳಿ, ಆರ್.ಜಿ.ಸನ್ನಿ, ಲಕ್ಷ್ಮಣ ಮಾಳಗಿ, ಕೃಷ್ಣಾ ಪಾಟೀಲ, ನಿಂಗಪ್ಪ ಕ್ಯಾದಿಗ್ಗೇರಿ, ಶಂಭುಗೌಡ ಪಾಟೀಲ ಹಾಗೂ ಇತರರು ಉಪಸ್ಥಿತರಿದ್ದರು.


DRAFT PUBLICATION
IN THE COURT OF THE PRL. CIVIL JUDGE AT HUMNABAD.
O.S.NO.9/2016.

Plaintiffs ;... Anita and another
//Vs//
Defendants;... Ratnamma and others.
Claim ;.. Suit for partition and separate possession etc.
To,
Defendant no.16. Kamlabai W/o Sharnappa , aged 74 years occupation Agriculture
R/o village Dhannura (K) Tq. Basvakalyan Dist Bidar.

Whereas, the plaintiff has filed the suit for partition and separate possession against you and others and has taken steps for your appearance in the proceeding several times but notices are not been served and you are avoiding the same. Therefore you are hereby summoned to appear before this Hon'ble court in person or through your pleader, duly instructed and able to answer all material questions relating to the claim of the plaintiff on the day of 18-10- 2025. at 10-30 clock to answer the claim of plaintiff and you are directed to produce all such documents upon which you intend to rely in support of your defense.

Take notice that in default of your appearance on the day before mentioned, the suit will be heard and determined in your absence.

Given under my hand and seal of the court, this day of 17-09-2025

//By order of the court//
C.M.O., Prl. Civil Judge
Court At Humnabad

# ಅತಿವೃಷ್ಟಿ ಹಾಗೂ ಪ್ರವಾಹ ಪೀಡಿತ ಗ್ರಾಮಗಳ ಜನರಿಗೆ ಸುಮಾರು 2,500 ಆಹಾರ ಸಾಮಗ್ರಿಗಳ ಪೊಟ್ಟಣ ವಿತರಣೆ- ಸಂಸದ ರಾಧಾಕೃಷ್ಣ ದೊಡ್ಡಮನಿ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ ಜಿಲ್ಲೆಯ ಅತೀವೃಷ್ಟಿ ಹಾಗೂ ಪ್ರವಾಹ ಪರಿಸ್ಥಿತಿ ಎದುರಿಸುತ್ತಿರುವ ಗ್ರಾಮಗಳ ಜನರಿಗೆ ಆಹಾರ ಸಾಮಗ್ರಿಗಳ ಪೊಟ್ಟಣಗಳನ್ನು ನಾಳೆ ( ಶುಕ್ರವಾರ) ಜಿಲ್ಲಾಡಳಿತ ಮೂಲಕ ನೀಡಲಾಗುವುದು ಎಂದು ಕಲಬುರಗಿ ಲೋಕಸಭಾ ಸದಸ್ಯರಾದ ರಾಧಾಕೃಷ್ಣದೊಡ್ಡಮನಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಅತೀವೃಷ್ಟಿ ಹಾಗೂ ಪ್ರವಾಹ ಎದುರಿಸುತ್ತಿರುವ ಗ್ರಾಮಗಳ ಜನರಿಗೆ ವೈಯಕ್ತಿಕವಾಗಿ ಸುಮಾರು 2,500 ಆಹಾರ ಸಾಮಗ್ರಿಗಳ ಪೊಟ್ಟಣಗಳನ್ನು ಜಿಲ್ಲಾಡಳಿತದ ಮೂಲಕ ನೀಡಲಾಗುವುದು ಎಂದು ಸಂಸದರು ತಿಳಿಸಿದ್ದಾರೆ.

ಕಲಬುರಗಿ ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ನಿರಂತರ ಮಳೆ ಸುರಿಯುತ್ತಿದ್ದು ಅತೀವೃಷ್ಟಿ ಉಂಟಾಗಿದೆ ಜೊತೆಗೆ ಭೀಮಾ ಹಾಗೂ ಬೆಣ್ಣೆ ತೊರೆ ನದಿಗಳು ತುಂಬಿ ಹರಿಯುತ್ತಿದ್ದು ನದಿಪಾತ್ರದ ಗ್ರಾಮಗಳಲ್ಲಿ ಪ್ರವಾಹ ಉಂಟಾಗಿದೆ. ಪರಿಣಾಮವಾಗಿ ನೂರಾರು ಸಂಖ್ಯೆಯಲ್ಲಿ ಗ್ರಾಮಸ್ಥರನ್ನು ಸುರಕ್ಷಿತ ಜಾಗಗಳಿಗೆ ಸ್ಥಳಾಂತರ ಮಾಡಲಾಗಿದೆ.

ಸರ್ಕಾರಿ ಶಾಲೆಗಳು, ಸಮುದಾಯ ಭವನಗಳು ಹಾಗೂ ದೇವಾಲಯಗಳನ್ನು ಕಾಳಜಿ ಕೇಂದ್ರಗಳನ್ನಾಗಿ ಪರಿವರ್ತಿಸಿ ಸ್ಥಳಾಂತರಗೊಂಡ ಗ್ರಾಮಸ್ಥರಿಗೆ ವಾಸ್ತವ್ಯ ಕಲ್ಪಿಸಲಾಗಿದೆ. ಮನೆಗಳನ್ನು ಬಿಟ್ಟು ಕಾಳಜಿ ಕೇಂದ್ರಗಳಲ್ಲಿ ಇರುವ ಮಹಿಳೆಯರು ಮಕ್ಕಳು ಹಾಗೂ ವೃದ್ದರಿಗೆ ಬೇಕಾಗುವ ಅಗತ್ಯ ವಸ್ತುಗಳನ್ನು ಒದಗಿಸಲಾಗಿದೆ.

ಕಾಳಜಿ ಕೇಂದ್ರಗಳ ಉಸ್ತುವಾರಿಗೆ ಹಾಗೂ ಪ್ರವಾಹ ಪೀಡಿತ ಗ್ರಾಮಗಳಲ್ಲಿ ಸುರಕ್ಷತೆ ಕೈಗೊಳ್ಳಲು ಅಧಿಕಾರಿಗಳ ತಂಡಗಳನ್ನು ನೇಮಿಸಲಾಗಿದೆ.

ಸಂಸದರಾಗಿ ತಾವು ಹಾಗೂ ರಾಜ್ಯ ಸರ್ಕಾರ ಮತ್ತು ಅಧಿಕಾರಿಗಳು ಮಳೆಯಿಂದ ಹಾನಿಗೊಳಗಾದ ಜನರಿಗೆ ಅಗತ್ಯ ನೆರವು ನೀಡಲಿರುವುದಾಗಿ ಹೇಳಿದ ರಾಧಾಕೃಷ್ಣ ಅವರು, ಮಳೆಯಿಂದ ಹಾನಿಗೊಳಗಾದ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳ ಮತ್ತು ಮನೆಗಳ ಸರ್ವೆ ಮಾಡುವಂತೆ ಈಗಾಗಲೇ ಅಧಿಕಾರಿಗಳಿಗೆ ಸಲಹೆ–ಸೂಚನೆ ನೀಡಲಾಗಿದೆ ಎಂದಿದ್ದಾರೆ.

ಮಳೆಯಿಂದ ಹಾನಿಗೊಳಗಾದ ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ರಾಜ್ಯವ್ಯಾಪ್ತಿಯ ರಸ್ತೆಗಳು ಹಾಗೂ ಇತರೆ ಮೂಲಭೂತ ಸೌಕರ್ಯಗಳ ಮರುಸ್ಥಾಪನೆಗೆ ಕೇಂದ್ರ ಹಾಗೂ ರಾಜ್ಯದಿಂದ ಅಗತ್ಯ ಅನುದಾನ ತರುವಲ್ಲಿ ತುರ್ತು ಕ್ರಮವಹಿಸಲಾಗುವುದು ಎಂದು ಸಂಸದರು ಹೇಳಿದ್ದಾರೆ.

# ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ವಿಳಂಬ
## ಆ್ಯಪ್ ತೊಂದರೆ ಸರಿಪಡಿಸುವಂತೆ ಒತ್ತಾಯಿಸಿ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.25–ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ಕಾರ್ಯದಲ್ಲಿ ಸಾಕಷ್ಟು ತಾಂತ್ರಿಕ ತೊಂದರೆ ಉಂಟಾಗುತ್ತಿದ್ದು ಸಮೀಕ್ಷಾ ಕಾರ್ಯದಲ್ಲಿ ತೊಡಗಿರುವ ಶಿಕ್ಷಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸುವಂತೆ ಒತ್ತಾಯಿಸಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಟನೆ ವತಿಯಿಂದ ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಎಂ.ಬಿ.ಬಳ್ಳಾರಿ ನೇತೃತ್ವದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು ಸಮೀಕ್ಷೆ ಸಮಯದಲ್ಲಿ ಉಂಟಾಗುತ್ತಿರುವ ತೊಂದರೆ ಸರಿಪಡಿಸುವಂತೆ ಒತ್ತಾಯಿಸಿ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿದರು.

ಮೊಬೈಲ್ ಆ್ಯಪ್ ಗೆ ಸರಿಯಾದ ಲೊಕೇಶನ್ ಸಿಗುತ್ತಿಲ್ಲ. ಒಬ್ಬ ಸಮೀಕ್ಷಾದಾರರಿಗೆ 70 ಕ್ಕಿಂತ ಹೆಚ್ಚು ಮನೆಗಳನ್ನು ನಿಗದಿಗೊಳಿಸಿದರೆ ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವುದು ಸಾಧ್ಯವಾಗುವುದಿಲ್ಲ ಎಂದ ಪ್ರತಿಭಟನಾಕಾರರು, ಸಮೀಕ್ಷೆ ನಡೆಸಲು ನಾವು ಸಿದ್ಧ, ಆದರೆ ಆ್ಯಪ್ ನ ತಾಂತ್ರಿಕ ತೊಂದರೆಯನ್ನು ಸರಿಪಡಿಸಬೇಕು

ಇಲ್ಲವೇ ಮ್ಯಾನುವಲ್ (ಮುದ್ರಿತ ಪ್ರತಿಯ ಮೂಲಕ) ಸಮೀಕ್ಷಾ ಕಾರ್ಯಕ್ಕೆ ಅವಕಾಶ ಕೊಡಬೇಕು ಎಂದು ಆಗ್ರಹಿಸಿದರು.

ಈ ಕುರಿತು ಜಿಲ್ಲಾಧಿಕಾರಿಗಳಿಗೆ ಬರೆದಿರುವ ಮನವಿ ಪತ್ರವನ್ನು ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅವರಿಗೆ ಸಲ್ಲಿಸಿ, ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಕೂಡಲೇ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಅಲ್ಲಿಯವರೆಗೆ ನಾವು ಸಮೀಕ್ಷೆ ಕಾರ್ಯದಲ್ಲಿ ತೊಡಗುವುದಿಲ್ಲ ಎಂದು ಪ್ರತಿಭಟನಾನಿರತ ಶಿಕ್ಷಕರು ಹೇಳಿದರು.

ಲಕ್ಷ್ಮಣ ಯಂಕಂಚಿ, ಎಚ್.ಎಂ.ಲಾಯದಗುಂದಿ,ವಿ.ಬಿ.ಹಾದಿಮನಿ, ವಿಠ್ಠಲವಾಲೀಕಾರ,ವಾಯ್.ಡಿ.ಕಿರಸೂರ, ಪಾಂಡುರಂಗ ಸನ್ನಪ್ಪನವರ, ರಮೇಶ ಆಲಗುಂಡಿ, ಹೇಮಾ ಕೊಡ್ಡನ್ನವರ ಸೇರಿದಂತೆ ನೂರಾರು ಶಿಕ್ಷಕರು ಪ್ರತಿಭಟನೆಯಲ್ಲಿದ್ದರು.

# ಕೆರೆ ಹೆಸರು ಬದಲು, ವೃತ್ತ ಸ್ಥಾಪನೆಗೆ ತೀವ್ರ ವಿರೋಧ



ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 25 : ಬಸವಕಲ್ಯಾಣದ ತ್ರಿಪುರಾಂತ ಕೆರೆಗೆ ರೇವಣಸಿದ್ಧೇಶ್ವರ ಹೆಸರಿಡಬೇಕು ಹಾಗೂ ಮುಖ್ಯ ರಸ್ತೆಯಲ್ಲಿ ರೇಣುಕಾಚಾರ್ಯರ ವೃತ್ತ ಸ್ಥಾಪಿಸಬೇಕೆಂಬ ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರ ಸಲಹೆಗೆ ಜಾಗತಿಕ ಲಿಂಗಾಯತ ಮಹಾಸಭಾದ ಕೇಂದ್ರ ಸಮಿತಿಯ ಉಪಾಧ್ಯಕ್ಷ ಬಸವರಾಜ ಧನ್ನೂರ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಬಸವಕಲ್ಯಾಣ ಸಮಾನತೆಗಾಗಿ ಕ್ರಾಂತಿ ನಡೆದ ಪುಣ್ಯ ಭೂಮಿ. ಈ ನೆಲದ ಪಾವಿತ್ರ್ಯಕ್ಕೆ ಧಕ್ಕೆ ಉಂಟು ಮಾಡುವಂತಹ ಯಾವುದೇ ಕುತಂತ್ರಕ್ಕೆ ಅವಕಾಶ ಕೊಡುವುದಿಲ್ಲ ಎಂದು ಎಚ್ಚರಿಸಿದ್ದಾರೆ. ಕೆರೆ ಹೆಸರು ಬದಲಿಸುವುದು ಹಾಗೂ ರೇಣುಕಾಚಾರ್ಯರ ವೃತ್ತ ಸ್ಥಾಪಿಸುವುದನ್ನು ಬಸವಾನುಯಾಯಿಗಳು ಒಪ್ಪುವುದಿಲ್ಲ. ಬಸವಕಲ್ಯಾಣದ ಮರದ ಒಂದು ಎಲೆಗೆ ಸಹ ಕೈ ಹಚ್ಚಲು ಬಿಡುವುದಿಲ್ಲ ಎಂದು ತಿಳಿಸಿದ್ದಾರೆ. ಬಸವ ಭಕ್ತರ ವಿರೋಧ ಮನ್ನಿಸಿ ರಂಭಾಪುರಿ ಶ್ರೀಗಳು ಅಡ್ಡಪಲ್ಲಕ್ಕಿ ಕೈಬಿಟ್ಟಿರುವುದನ್ನು ಸ್ವಾಗತಿಸುತ್ತೇವೆ. ಶರಣರ ನೆಲದಲ್ಲಿ ದಸರಾ ದರ್ಬಾರ್ ನಡೆಸಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಶ್ರೀಗಳು ಬಸವ ಭಕ್ತರಿಗೆ ಕೃತಜ್ಞರಾಗಿರಬೇಕೇ ಹೊರತು ದರ್ಬಾರ್ ಅನ್ನು ಬಸವ ತತ್ವ ವಿರೋಧಿ ಕಾರ್ಯಕ್ಕೆ ವೇದಿಕೆ ಆಗಿಸಿಕೊಳ್ಳಬಾರದು. ಜನರ ತಲೆ ಕೆಡಿಸುವ ಹಾಗೂ ಸಮಾಜದ ಸ್ವಾಸ್ಥ್ಯ ಹಾಳುಗೆಡುವ ಕೆಲಸಕ್ಕೆ ಕೈಹಾಕಬಾರದು ಎಂದು ತಿಳಿಸಿದ್ದಾರೆ. ಬಸವ ಭಕ್ತರ ವಿರೋಧ ಇರುವುದು ಗೊತ್ತಿದ್ದೂ ಸ್ಥಳೀಯ ಶಾಸಕರು ದಸರಾ ದರ್ಬಾರ್ ಆಯೋಜನೆ ಮುಂದಾಳತ್ವ ವಹಿಸಿರುವುದು ಬಸವ ಭಕ್ತರ ಅಸಮಾಧಾನಕ್ಕೆ ಕಾರಣವಾಗಿದೆ. ಇನ್ನು ಕೆರೆ ಹೆಸರು ಬದಲಾವಣೆ ಹಾಗೂ ವೃತ್ತ ಸ್ಥಾಪನೆಗೆ ಮುಂದಾದರೆ ಅದಕ್ಕೆ ಭಾರಿ ಬೆಲೆ ತೆರಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

# ಸಂಸ್ಕಾರ ಸಂಸ್ಕೃತಿಯ ಪರಿಪಾಲನೆಯಿಂದ ಬಾಳು ಉಜ್ವಲ : ರಂಭಾಪುರಿ ಜಗದ್ಗುರುಗಳು



ಬಸವಕಲ್ಯಾಣ:ಸೆ.25:ಭಾರತೀಯ ಪವಿತ್ರ ಸಂಸ್ಕೃತಿ ಎಲ್ಲರನ್ನು ಒಗ್ಗೂಡಿಸುವುದೇ ಹೊರತು ವಿಘಟಿಸುವುದಲ್ಲ. ಆಧುನಿಕ ಜಗತ್ತಿನಲ್ಲಿ ಪ್ರಗತಿಪರ ವಿಚಾರಧಾರೆಗಳ ಹೆಸರಿನಲ್ಲಿ ಉತ್ಕೃಷ್ಟ ಸಂಸ್ಕೃತಿ ಕಲುಷಿತಗೊಳ್ಳಬಾರದು. ಉತ್ತಮ ಸಂಸ್ಕಾರ ಮತ್ತು ಸಂಸ್ಕೃತಿಯ ಪರಿಪಾಲನೆಯಿಂದ ಬಾಳು ಉಜ್ವಲಗೊಳ್ಳುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು. ಅವರು ಗುರುವಾರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ 4ನೇ ದಿನದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಸಂಸ್ಕಾರ ಬಹಳ ಮುಖ್ಯ. ಭಗವಂತನಿತ್ತ ಸಂಪತ್ತು ಬಾಳಿನ ನಿಜವಾದ ಸಂಪತ್ತೆಂಬುದನ್ನು ಮರೆಯಬಾರದು. ಫಲವಿತ್ತ ರೆಂಬೆ, ಗೊನೆ ಹೊತ್ತ ಬಾಳೆ, ತೆನೆ ಹೊತ್ತ ದಂಟು ಯಾವಾಗಲೂ ಬಾಗುವಂತೆ ಸಂಸ್ಕಾರದಿಂದ ಮನುಷ್ಯ ಸದ್ಗುಣವಂತನಾಗಲು ಸಾಧ್ಯವಾಗುತ್ತದೆ. ದೇವರು ಮತ್ತು ಧರ್ಮವನ್ನು ಯಾರೂ ಮರೆಯಬಾರದು. ದೇವರು ಎಲ್ಲರಲ್ಲೂ ಇರುವನು. ಆದರೆ ಎಲ್ಲರೂ ದೇವರಲ್ಲಿ ಇಲ್ಲ. ಧಾರ್ಮಿಕ ಸಂಸ್ಕೃತಿಯ ಪುನರುತ್ಥಾನದ ಜೊತೆಗೆ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಿದ ಕೀರ್ತಿ ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ. ನೀತಿಯಿಲ್ಲದ ಶಿಕ್ಷಣ, ಭೀತಿಯಿಲ್ಲದ ಶಾಸನ, ಮಿತಿಯಿಲ್ಲದ ಜೀವನ ಮತ್ತು ಸೀಮಾತೀತವಾದ ಸ್ವಾತಂತ್ರ್ಯ ಮನುಷ್ಯನ ಬದುಕನ್ನು ನಾಶಗೊಳಿಸುತ್ತದೆ. ಬಾಳಿನ ಭಾಗ್ಯೋದಯಕ್ಕೆ ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯ, ದಯಾ ಕ್ಷಮಾ ದಾನ ಪೂಜಾ ಜಪ ಮತ್ತು ಧ್ಯಾನ ಮುಖ್ಯವಾದ ಅಂಶಗಳಾಗಿವೆ. ಸಮರ ಜೀವನವನ್ನು ಅಮರ ಜೀವನವನ್ನಾಗಿ ಪರಿವರ್ತಿಸುವಲ್ಲಿ ಸಂಸ್ಕಾರ ಮತ್ತು ಸಂಸ್ಕೃತಿ ಪ್ರಮುಖ ಪಾತ್ರವನ್ನು ಪಡೆದಿವೆ. ಉತ್ತಮ ಬರಹಗಾರರಾದ ಮತ್ತು ಚಿಂತಕರಾದ ಕಲಬುರ್ಗಿಯ ಶ್ರೀಮತಿ ಅಮರಾವತಿ ಹಿರೇಮಠ ಅವರಿಗೆ 'ಸಾಹಿತ್ಯ ಸಿರಿ" ಪ್ರಶಸ್ತಿ ಅನುಗ್ರಹಿಸಿರುವುದು ತಮಗೆ ಅತ್ಯಂತ ಸಂತೋಷ ಉಂಟು ಮಾಡಿದೆ. ಈ ಅಪೂರ್ವ ಸಂದರ್ಭದಲ್ಲಿ ಬಾಗಲಕೋಟೆಯ ವೀರೇಶ ಹಿರೇಮಠ ಅವರು 'ಪರಿಶ್ರಮ ವಾರ್ತೆ' ದಸರಾ ವಿಶೇಷ ಸಂಚಿಕೆಯನ್ನು ಮುದ್ರಿಸಿ ಧರ್ಮಾಭಿಮಾನಿಗಳ ಕೈಗೆ ಕೊಡುತ್ತಿರುವುದು ಅವರಲ್ಲಿರುವ ಧರ್ಮನಿಷ್ಠೆ ಶ್ರದ್ಧಾ ಮನೋಭಾವ ಮತ್ತು ಅಪಾರವಾದ ಅಭಿಮಾನವನ್ನು ಕಾಣುತ್ತೇವೆ ಎಂದರು. ತುಮಕೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ॥ ಮೀನಾಕ್ಷಿ ಖಂಡಿಮಠ ಮಾತನಾಡಿ ಮನುಷ್ಯ ಜೀವನ ಸುಂದರ ಶುದ್ಧಗೊಳಿಸುವುದೇ ಸಂಸ್ಕಾರದ ಮೂಲ ಗುರಿಯಾಗಿದೆ. ಮನುಷ್ಯನಿಗೆ ಹೆತ್ತತಾಯಿ ಹೊತ್ತಭೂಮಿ ಎಷ್ಟು ಮುಖ್ಯವೋ ಅಷ್ಟೇ ಸಂಸ್ಕಾರ ಮುಖ್ಯವಾಗಿದೆ. ಸಂವೇದನಾಶೀಲ ಜೀವನಕ್ಕೆ ಸಂಸ್ಕಾರ ಸಂಸ್ಕೃತಿಗಳ ಪರಿಪಾಲನೆ ಬಹು ಪ್ರಮುಖ ಪಾತ್ರ ವಹಿಸುತ್ತದೆ. ಆದರ್ಶ ಬದುಕು ಸಂಸ್ಕಾರದಿಂದ ಮಾತ್ರ ಸಾಧ್ಯ ಹೊರತು ಬೇರೆ ಯಾವುದರಿಂದಲೂ ಸಾಧ್ಯವಾಗುವುದಿಲ್ಲ. ಭೌತಿಕ ಬದುಕಿಗೆ ಆಧ್ಯಾತ್ಮ ಜ್ಞಾನದ ಅರಿವನ್ನು ಉಂಟು ಮಾಡುವುದರಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಚಿಂತನಗಳು ಸಕಲರ ಬಾಳಿನಲ್ಲಿ ಬೆಳಕು ಮೂಡಿಸಿವೆ ಎಂದರು.

ನೇತೃತ್ವ ವಹಿಸಿದ ಶಕಾಪುರ ತಪೋವನಮಠದ ಡಾ॥ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಸುವಿಚಾರಗಳ ಮತ್ತು ಶುಭ ಭಾವನೆಗಳ ಬುಟ್ಟಿಯಾಗಬೇಕು ಎಲ್ಲರ ಮನಸ್ಸು. ಮನಸ್ಸು ಭಾವ ಪರಿಶುದ್ಧಗೊಂಡಾಗ ಬದುಕಿನಲ್ಲಿ ಶ್ರೇಯಸ್ಸು ದೊರಕುವುದರಲ್ಲಿ ಸಂದೇಹವಿಲ್ಲ. ಭವಿ ಭಕ್ತನಾಗುವ, ನರ ಹರನಾಗುವ ಜೀವಾತ್ಮ ಪರಮಾತ್ಮನಾಗಲು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಚಿಂತನಗಳು ನಮ್ಮೆಲ್ಲರಿಗೆ ಆಶಾಕಿರಣವಾಗಿವೆ ಎಂದರು. ಸಮ್ಮುಖ ವಹಿಸಿದ ಅಫಜಲಪುರ ಹಿರೇಮಠದ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ದೊಡ್ಡ ದೊಡ್ಡ ಮಾತುಗಳನ್ನು ಆಡುವುದರಿಂದ ಮನುಷ್ಯ ದೊಡ್ಡವನಾಗುವುದಿಲ್ಲ. ದೊಡ್ಡ ಗುಣ ದೊಡ್ಡ ಮನಸ್ಸು ಇದ್ದರೆ ಮಾತ್ರ ದೊಡ್ಡವನಾಗಲು ಸಾಧ್ಯ. ಶ್ರೀ ರಂಭಾಪುರಿ ಜಗದ್ಗುರುಗಳ ಧರ್ಮ ಜ್ಞಾನ ಯಜ್ಞ ನಮ್ಮೆಲ್ಲರನ್ನು ಪಾವನರನ್ನಾಗಿ ಮಾಡುತ್ತಿದೆ ಎಂದರು. ಪರಿಶ್ರಮ ವಾರ್ತೆ ವಿಶೇಷ ಸಂಚಿಕೆ ಬಿಡುಗಡೆ ಮಾಡಿದ ಎಡೆಯೂರು ರೇಣುಕ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಮೌಲ್ಯಗಳ ಉಳಿವು ಬೆಳವಣಿಗೆ ಮಾನವನ ಆಚರಣೆಯಲ್ಲಿವೆ. ನೀತಿವಂತರು ನಿರಾಶರಾಗಬಾರದು. ನೋವು ನುಂಗಿ ನಲಿವು ಹೊರ ತೋರಬೇಕಾಗಿದೆ. ಬಹಳಷ್ಟು ಜನರಿಗೆ ಕರ್ತವ್ಯ ಪ್ರಜ್ಞೆಯಿಲ್ಲ. ನೀತಿ ಸಂಹಿತೆ ಅರಿತು ಬಾಳಲು ಇಂಥ ಪತ್ರಿಕೆಗಳ ಅವಶ್ಯಕತೆ ಬಹಳಷ್ಟಿದೆ. ಬಾಗಲಕೋಟೆ ವೀರೇಶ ಹಿರೇಮಠ ಈ ಪತ್ರಿಕೆಯ ಸಂಪಾದಕರಾಗಿ ಸಂಸ್ಕೃತಿ ಪುನರುತ್ಥಾನಗೊಳಿಸುವ ಕಾರ್ಯ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದರು. ಪ್ರಾಸ್ತಾವಿಕ ಮಾತನಾಡಿದ ಆಲಮೇಲ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಇಂದಿನ ನಾಗರಿಕ ಸಮಾಜದಲ್ಲಿ ಹಲವಾರು ಅನಾಗರೀಕತೆಯ ವರ್ತನೆಗಳು ನಡೆಯುತ್ತಿರುವುದು ನೋವಿನ ಸಂಗತಿ. ಮನಸ್ಸು ಬುದ್ಧಿ ಮತ್ತು ಸದ್ವಿಚಾರಗಳು ಸಮೃದ್ಧವಾಗಿ ಬೆಳೆದಾಗ ಶ್ರೇಯಸ್ಸು ನಿಶ್ಚಿತ. ಅಧಿಕಾರದ ದಾಹ, ಸಂಪತ್ತು ಮತ್ತು ಅವಿವೇಕತನದ ಮನುಷ್ಯನ ನಿಜವಾದ ಗುಣವನ್ನು ದೂರ ಮಾಡುತ್ತವೆ. ಸಮಾಜದಲ್ಲಿ ಶಾಂತಿ ಸಾಮರಸ್ಯ ಮೂಡಿ ಬರಲು ಧರ್ಮದ ನಿಜ ದಾರಿ ಅರಿಯಲು ಇಂಥ ಸಮಾರಂಭಗಳ ಅವಶ್ಯಕತೆ ಇದೆಯೆಂದರು. ಪ್ರಶಸ್ತಿ: ಕಲಬುರ್ಗಿಯ ಅಮರಾವತಿ ಎಸ್. ಹಿರೇಮಠ ಇವರಿಗೆ ಸಾಹಿತ್ಯ ಸಿರಿ ಪ್ರಶಸ್ತಿಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಪ್ರದಾನ ಮಾಡಿ ಆಶೀರ್ವದಿಸಿದರು. ಗೌರವಗುರುರಕ್ಷೆ : ಸ್ವಂತ ನರನಾಳ ಹಿರೇಮಠದ ಶಿವಕುಮಾರ ಶಿವಾಚಾರ್ಯರು, ಚಿಂಚಣಸೂರು ಕಲ್ಮಠದ ಸಿದ್ಧಮಲ್ಲ ಶಿವಾಚಾರ್ಯರು, ಯದಲಾಪುರ ಚರಮಾತೇಶ್ವರಮಠದ ಶಿವಶಂಕರ ಶಿವಾಚಾರ್ಯರು, ಮಾಗಣಗೇರಿ ವಿಶ್ವಾರಾಧ್ಯ ಶಿವಾಚಾರ್ಯರು, ಹಳ್ಳಿಖೇಡದ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಹುಡಗಿ ವಿರಕ್ತಮಠದ ಚನ್ನಮಲ್ಲ ಸ್ವಾಮಿಗಳು ಇವರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗೌರವ ಗುರುರಕ್ಷೆ ನೀಡಿ ಆಶೀರ್ವದಿಸಿದರು. ಬೈಲಹೊಂಗಲ ತಾಲೂಕಿನ ದೊಡ್ಡವಾಡದ ಅಜ್ಜಯ್ಯ ಪೂಜಾರ ಇವರು ಹೆಳವನ ವೇಷದಲ್ಲಿ ಬಂದು ಶ್ರೀ ಜಗದ್ಗುರು ರಂಭಾಪುರಿ ಪೀಠದ ಇತಿಹಾಸವನ್ನು ತಿಳಿಸಿದ್ದು ಜನಮನವನ್ನು ಸೆಳೆಯಿತು. ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲದ ಸಾಧಕರಿಂದ ವೇದಘೋಷ, ಬಸವಕಲ್ಯಾಣದ ಪ್ರೊ. ರುದ್ರೇಶ್ವರ ವಿರೂಪಾಕ್ಷ ಸ್ವಾಮಿ ಗೋರ್ಟಾ ಇವರಿಂದ ಸ್ವಾಗತ ಹಾಗೂ ಬಸವಕಲ್ಯಾಣದ ರಾಷ್ಟ್ರಕವಿ ಕುವೆಂಪು ಹಿ.ಪ್ರಾ.ಶಾಲಾ ಮಕ್ಕಳಿಂದ ಭರತ ನಾಟ್ಯ ಪ್ರದರ್ಶನ ನಡೆಯಿತು. ಗುರುಲಿಂಗಯ್ಯಾ ಹಿತ್ತಲಶಿರೂರ ಸಂಗೀತ ಜರುಗಿತು. ಶಿವಮೊಗ್ಗದ ಶಾಂತಾ ಆನಂದ ಹಾಗೂ ರಮೇಶ ರಾಜೋಳೆ ಶಿವಪೂರ ಇವರು ನಿರೂಪಿಸಿದರು. ಶ್ರೀ ಚನ್ನಬಸವೇಶ್ವರ ಹಿರೇಮಠ ಸಂಸ್ಥಾನ ಸುಕ್ಷೇತ್ರ ಹಾರಕೂಡ ಇವರಿಂದ ಅನ್ನ ದಾಸೋಹ ಜರುಗಿತು. ಈ ಸಂದರ್ಭದಲ್ಲಿ ಹಾರಕೂಡದ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು. ತಡೂಳಾದ ಪೂಜ್ಯ ಶ್ರೀ ರಾಜೇಶ್ವರ ಶಿವಾಚಾರ್ಯರು. ತ್ರಿಪುರಾಂತಿನ ಗವಿಮಠದ ಪೂಜ್ಯಶ್ರೀ ಡಾ ಅಭಿನವ ಘನಲಿಂಗ ರುದ್ರಮುನಿ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# 39 ನಿಗಮ-ಮಂಡಳಿಗಳಿಗೆ ಅಧ್ಯಕ್ಷರ ನೇಮಕ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಸೆ.25: ಸಾಕಷ್ಟು ಹಗ್ಗಜಗ್ಗಾಟ ಬಳಿಕ ರಾಜ್ಯ ಸರ್ಕಾರ ಕೊನೆಗೂ ಬಹುನಿರೀಕ್ಷಿತ ನಿಗಮ–ಮಂಡಳಿಗಳ ಮತ್ತು ಪ್ರಾಧಿಕಾರಗಳ ಅಧ್ಯಕ್ಷರ ಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಿದ್ದು, ಯೋಗೀಶ್‌ಗೌಡ ಕೊಲೆ ಪ್ರಕರಣದ ಆರೋಪದಡಿ ಜೈಲು ಸೇರಿರುವ ವಿನಯ್ ಕುಲಕರ್ಣಿಯವರ ಪತ್ನಿ ಶಿವಲೀಲಾ ಕುಲಕರ್ಣಿಯವರಿಗೂ ಸ್ಥಾನ ನೀಡಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರು ಬುಧವಾರ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಶಿವಲೀಲಾ ವಿನಯ್ ಕುಲಕರ್ಣಿ ಅವರನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ಈ ಮಂಡಳಿಗೆ ಈ ಹಿಂದೆ ವಿನಯ್ ಕುಲಕರ್ಣಿ ಅವರೂ ಅಧ್ಯಕ್ಷರಾಗಿದ್ದರು.

ಜೈವಿಕ ವೈವಿಧ್ಯತೆ ಮಂಡಳಿಯ ಅಧ್ಯಕ್ಷರಾಗಿ ವಡ್ನಾಳ್ ಜಗದೀಶ್ ಅವರನ್ನು ನೇಮಕ ಮಾಡಿದ್ದರೆ, ಕಾಂಗ್ರೆಸ್ ವಕ್ತಾರೆ ಲಾವಣ್ಯ ಬಲ್ಲಾಳ್ ಜೈನ್ ಅವರನ್ನು ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ದೃಢೀಕರಣ ಸಂಸ್ಥೆಗೆ ಅಧ್ಯಕ್ಷರಾಗಿ ನೇಮಿಸಲಾಗಿದೆ.

ಪಿ ರಘು ಅವರನ್ನು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗಕ್ಕೆ ಮತ್ತು ಮಾಜಿ ಶಾಸಕ ಎಸ್‌ಜಿ ನಂಜಯ್ಯನಮಠ ಅವರನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ನೇಮಿಸಲಾಗಿದೆ.

ಎಂ.ಎಸ್.ಮುತ್ತುರಾಜ್ (ಸವಿತಾ ಸಮಾಜ ಅಭಿವೃದ್ಧಿ ನಿಗಮ), ನಂಜಪ್ಪ (ಮಡಿವಾಳ ಮಾಚಿದೇವ), ವಿಶ್ವಾಸ ದಾಸ್ (ಗಾಣಿಗ), ಮರಿಯೋಜಿ ರಾವ್ (ಮರಾಠ), ಮಹೇಶ್ (ಕಾಡುಗೊಲ್ಲ), ಶ್ರೀನಿವಾಸ ವೇಲು (ಕುಂಬಾರ), ಮತ್ತು ಧರ್ಮಣ್ಣ ಉಪ್ಪಾರ– ಉಪ್ಪಾರ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರಾಗಿ ನೇಮಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಚರ್ಚೆ ನಡೆಸಿ ಪಟ್ಟಿ ಅಂತಿಮಗೊಳಿಸಿ ಕೆ.ಸಿ. ವೇಣುಗೋಪಾಲ್ ಅವರಿಗೆ ಸಲ್ಲಿಸಿದ್ದರು. ಅವರು ಇತ್ತೀಚೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪಟ್ಟಿ ರವಾನಿಸಿದ್ದರು. ಕಾಂಗ್ರೆಸ್ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ಪಟ್ಟಿಗೆ ಅನುಮೋದನೆ ನೀಡಿದ ಬಳಿಕ, ಪಟ್ಟಿಯನ್ನು ಕೆ.ಸಿ. ವೇಣುಗೋಪಾಲ್ ಅವರು ಮುಖ್ಯಮಂತ್ರಿಗಳಿಗೆ ರವಾನಿಸಿದ್ದಾರೆ.

## ಅಧ್ಯಕ್ಷರ ಪಟ್ಟಿ:

ಪಿ.ರಘು – ಸಫಾಯಿ ಕರ್ಮಚಾರಿ ಆಯೋಗ
ಅರುಣ್ ಪಾಟೀಲ್ – ಎನ್‌ಡಬ್ಲ್ಯೂಕೆಎಸ್‌ಆರ್‌ಟಿಸಿ
ಶಿವಲೀಲಾ ವಿನಯ್ ಕುಲಕರ್ಣಿ – ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ವಡ್ನಾಳ್ ಜಗದೀಶ್ – ಜೀವವೈವಿಧ್ಯ ಮಂಡಳಿ
ಮುರಳಿ ಅಶೋಕ್ – ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ
ಡಾ.ಮೂರ್ತಿ – ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ
ಮಲ್ಲಿಕಾರ್ಜುನ್ – ಮಾಜಿ ಸೈನಿಕರ ಕಲ್ಯಾಣ ಮಂಡಳಿ
ಡಾ.ಬಿ.ಸಿ.ಮುದ್ದುಗಂಗಾಧರ್ – ಮಾವು ಅಭಿವೃದ್ಧಿ ನಿಗಮ
ಶರ್ಲೆಟ್ ಪಿಂಟೋ – ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ
ಮರಿಯೋಜಿ ರಾವ್ – ಮರಾಠ ಅಭಿವೃದ್ಧಿ ನಿಗಮ
ಎಂ.ಎ.ಗಫೂರ್ – ಕರಾವಳಿ ಅಭಿವೃದ್ಧಿ ಪ್ರಾಧಿಕಾರ
ಕೆ. ಹರೀಶ್ ಕುಮಾರ್ – ಮೆಸ್ಕಾಂ
ಎನ್. ಸಂಪಂಗಿ – ಕರ್ನಾಟಕ ವೇರ್‌ಹೌಸಿಂಗ್ ಕಾರ್ಪೊರೇಷನ್
ವೈ. ಸಯೀದ್ ಅಹ್ಮದ್ –ದೇವರಾಜ ಅರಸು ಟ್ರಕ್ ಟರ್ಮಿನಲ್
ಮಹೇಶ್ – ಕಾಡುಗೊಲ್ಲಅಭಿವೃದ್ಧಿ ನಿಗಮ
ಮಂಜಪ್ಪ – ಬಯಲುಸೀಮೆ ಅಭಿವೃದ್ಧಿ ಮಂಡಳಿ, ಚಿತ್ರದುರ್ಗ
ಧರ್ಮಣ್ಣ ಉಪ್ಪಾರ – ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ
ಅಗಾ ಸುಲ್ತಾನ್ – ಕೇಂದ್ರ ಪರಿಹಾರ ಸಮಿತಿ
ಎಸ್.ಜಿ. ನಂಜಯ್ಯನಮಠ – ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ
ಆಂಜನಪ್ಪ – ಬೀಜ ಅಭಿವೃದ್ಧಿ ನಿಗಮ ನಿಯಮಿತ
ನೀಲಕಂಠ ಮುಳ್ಗೆ – ಕಲ್ಯಾಣ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ
ಬಾಬು ಹೊನ್ನಾ ನಾಯ್ಕ್ – ಕಾಡಾ, ಭೀಮರಾಯನಗುಡಿ, ಕಲಬುರಗಿ
ಯುವರಾಜ್ ಕದಂ – ಮಲಪ್ರಭಾ ಮತ್ತು ಘಟಪ್ರಭಾ ಯೋಜನೆ ಕಾಡಾ, ಬೆಳಗಾವಿ
ಅನಿಲ್ ಕುಮಾರ್ ಜಾಮಬಾರ್ – ತೊಗರಿಬೇಳೆ ಅಭಿವೃದ್ಧಿ ನಿಗಮ, ಕಲಬುರಗಿ
ಪ್ರವೀಣ್ ಹರ್ವಾಲ್ – ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ)
ಮಂಜುನಾಥ ಪೂಜಾರಿ – ನಾರಾಯಣ ಗುರು ಅಭಿವೃದ್ಧಿ ನಿಗಮ
ಸೈಯದ್ ಮೊಹಮೂದ್ ಚಿಸ್ತಿ – ಬೇಳೆಕಾಳುಗಳ ಅಭಿವೃದ್ಧಿ ಮಂಡಳಿ ನಿಯಮಿತ, ಕಲಬುರಗಿ
ಎಂ.ಎಸ್. ಮುತ್ತುರಾಜ್ – ಸವಿತಾ ಸಮಾಜ ಅಭಿವೃದ್ಧಿ ನಿಗಮ
ನಂಜಪ್ಪ – ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ
ವಿಶ್ವಾಸ್ ದಾಸ್ – ಗಾಣಿಗ ಅಭಿವೃದ್ಧಿ ನಿಗಮ
ಆರ್.ಎಸ್. ಸತ್ಯನಾರಾಯಣ – ರಾಜ್ಯ ಮದ್ಯಪಾನ ಸಂಯಮ ಮಂಡಳಿ
ಗಂಗಾಧರ್ – ರೇಷ್ಮೆ ಮಾರುಕಟ್ಟೆ ಮಂಡಳಿ ಲಿಮಿಟೆಡ್
ಶಿವಪ್ಪ –ಹಾಸನ ನಗರಾಭಿವೃದ್ಧಿ ಪ್ರಾಧಿಕಾರ
ಬಿ.ಎಸ್. ಕವಲಗಿ –ನಿಂಬೆ ಅಭಿವೃದ್ಧಿ ಮಂಡಳಿ
ಡಾ. ಶ್ರೀನಿವಾಸ ವೇಲು – ಕುಂಬಾರ ಅಭಿವೃದ್ಧಿ ನಿಗಮ
ಟಿ.ಎಂ. ಶಹೀದ್ ಥೆಕ್ಕಿಲ್ – ರಾಜ್ಯ ಕನಿಷ್ಠ ವೇತನ ಮಂಡಳಿ
ಚೇತನ್ ಕೆ. ಗೌಡ – ಕೈಮಗ್ಗ ಅಭಿವೃದ್ಧಿ (ಪವರ್‌ಲೂಮ್) ಮಂಡಳಿ
ಶರಣಪ್ಪ ಸಲಾದ್‌ಪುರ್ –ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಅಭಿವೃದ್ಧಿ ಮಂಡಳಿ
ಲಾವಣ್ಯ ಬಲ್ಲಾಳ್ ಜೈನ್ –ರಾಜ್ಯ ಬೀಜ ಮತ್ತು ಸಾವಯವ ದೃಢೀಕರಣ ಸಂಸ್ಥೆ

# ಅರ್ಥಪೂರ್ಣ ಗಾಂಧಿ ಜಯಂತಿಗೆ ಕರೆ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಸೆ.25 : ಇದೇ ಅಕ್ಟೋಬರ್.2 ರಂದು ರಾಷ್ಟ್ರಪಿತ ಮಹಾತ್ಮಾ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸೋಣ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ ಅವರು ತಿಳಿಸಿದರು.

ಅವರು ಗುರುವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಕ್ಟೋಬರ್.2 ರಂದು ನಡೆಯುವ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಅಂಗವಾಗಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಂದು ಮಹಾತ್ಮಾ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಬೆಳಿಗ್ಗೆ 10 ಗಂ–ಟೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಯಂತಿಯನ್ನು ಆಚರಿಸಲಾಗುವುದು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರ್, ಕ.ನೀ.ನಿ.ನಿ. ರವರ ಕಛೇರಿ,ಕೆ.ಪಿ.ಸಿ. ವಿಭಾಗ ನಂ–1 ಬೀದರ–585401
NO:EE/KNNL/KPCD-1/BDR/PB/TND/2025-26/ 968 Date:22.09.2025
::"ಇ"ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ::–2
ಉಲ್ಲೇಖ:–NO:EE/KNNL/KPCD-1/BDR/PB/TND/2025-26/ 817 Date:08.09.2025
ವ್ಯವಸ್ಥಾಪಕ ನಿರ್ದೇಶಕರು,ಕನೀನಿ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–1 ಬೀದರ ಅಡಿಯಲ್ಲಿ 4701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬರುವ ಕಾಲುವೆ ಆಧುನೀಕರಣ ಕಾಮಗಾರಿಗೆ Consultancy ಕರೆಯಲು ಅರ್ಹ ಸಮಾಲೋಚಕರಿಂದ "ಇ"ಪ್ರೊಕ್ಯೂರಮೆಂಟ್‌ನಲ್ಲಿ ಶೇಕಡವಾರು ದ್ವಿ ಲಕೋಟೆಯ ಟೆಂಡರ ಕರೆಯಲಾಗಿದ್ದು, ವಿವರ ಈ ಕೆಳಗಿನಂತಿದೆ. ಈ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ **ರೂ.42,22,500.00** (ನಲವತ್ತೆರಡು ಲಕ್ಷ ಇಪ್ಪತ್ತೆರಡು ಸಾವಿರದ ಐದು ನೂರು ರೂಪಾಯಿ ಮತ್ತು ಸೊನ್ನೆ ಪೈಸೆ ಮಾತ್ರ ಇದ್ದು), ಇ.ಎಂ.ಡಿ. ಮೊತ್ತ **ರೂ. 99,700/–** (ತೊಂಬತ್ತೊಂಬತ್ತು ಸಾವಿರದ ಏಳು ನೂರು ರೂಪಾಯಿ ಮಾತ್ರ ಇರುತ್ತದೆ). ಇದ್ದು, ಕೆಲಸದ ಅವಧಿ ಮಳೆಗಾಲ ಸೇರಿ 2 ತಿಂಗಳು ಇರುತ್ತದೆ. 1)"ಇ"ಪ್ರೊಕ್ಯೂರಮೇಂಟ್‌ನಲ್ಲಿ htpps://kppp.karnataka.gov.in ಖಾಲಿ ಟೆಂಡರ ಫಾರ್ಮಗೆ ವಿನಂತಿ ಮತ್ತು ಪೇಪರಗಳನ್ನು ಡೌನಲೋಡ್ ಮಾಡಿಕೊಳ್ಳುವುದು ಮತ್ತು ಇ–ಪೋರ್ಟಲ್ ಮೂಲಕ ಭರ್ತಿ ಮಾಡಿ ಟೆಂಡರ ಸಲ್ಲಿಸುವ **ದಿನಾಂಕ: 22–09–2025 ರಿಂದ 30–09–2025 ರ 16.00 ಘಂಟೆಯವರೆಗೆ.** 2) **ದಿನಾಂಕ: 03–10–2025 ರಂದು 11.15 ಘಂಟೆಯ** ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. 3) **ದಿನಾಂಕ: 04–10–2025 ರಂದು 17.00 ಘಂಟೆಯ ನಂತರ** ಅಥವಾ ತಾಂತ್ರಿಕ ಬಿಡ್ಡ ಅನುಮೋದನೆಗೊಂಡ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿದವರ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ಕನೀನಿನಿ, ಕೆ.ಪಿ.ಸಿ.ವಿಭಾಗ ನಂ.1, ಬೀದರ.
ವಾ.ಸಾ.ಸಂ.ಇ/ಬೀದರ/183/ಕೆ.ಎಸ್.ಎಂ.ಸಿ.&ಎ/2025–26

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.